ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 7 । ಸಂಚಿಕೆ : 10 । ಅಕ್ಟೋಬರ್-2025 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

## ಸಮಸ್ತ ಸಹಕಾರಿ ಬಂಧುಗಳಿಗೆ
## ಬೆಳಕಿನ ಹಬ್ಬ
## ದೀಪಾವಳಿಯ ಶುಭಾಶಯಗಳು



**ಎಸ್. ಚಂದ್ರಶೇಖರ್**
**ಅಧ್ಯಕ್ಷರು**



**ಧರೇಪ್ಪ ಎಂ. ಆಲಗೂರ**
**ಉಪಾಧ್ಯಕ್ಷರು**

ಹಾಗೂ ಆಡಳಿತ ಮಂಡಳಿ ಸದಸ್ಯರು,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ
ಮಹಾಮಂಡಳ ನಿ., ಬೆಂಗಳೂರು.

# ಮೈಸೂರು ದಸರಾ ಉದ್ಘಾಟನೆ : ಚಾಮುಂಡಿ ದೇವಿಗೆ ಸಾಹಿತಿ ಬಾನು ಮುಷ್ತಾಕ್ ಪುಷ್ಪಾರ್ಚನೆ



**ಮೈಸೂರು** : ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಉತ್ಸವಕ್ಕೆ ಇಂದು ಸೋಮವಾರ ಅಧಿಕೃತ ಚಾಲನೆ ಸಿಕ್ಕಿದೆ. ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಅವರು ಇಂದು ಬೆಳಗ್ಗೆ 10.10 ರಿಂದ 10.40ರ ನಡುವೆ ವೃಶ್ಚಿಕ ಲಗ್ನ ಮುಹೂರ್ತದಲ್ಲಿ ಚಾಮುಂಡೇಶ್ವರಿ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ನಾಡಹಬ್ಬ ದಸರಾಕ್ಕೆ ಮುನ್ನುಡಿ ನೀಡಿದರು.

ಮೈಸೂರು ಚಾಮುಂಡಿ ಬೆಟ್ಟದ ಮೇಲಿರುವ ಚಾಮುಂಡೇಶ್ವರಿ ದೇವಾಲಯದ ಆವರಣದಲ್ಲಿ, ಪುರೋಹಿತರ ವೇದ ಮಂತ್ರಗಳ ಪಠಣದ ನಡುವೆ, ಮೈಸೂರು ಮತ್ತು ಅದರ ರಾಜಮನೆತನದ ದೇವತೆ ಚಾಮುಂಡೇಶ್ವರಿ ವಿಗ್ರಹದ ಮೇಲೆ ಪುಷ್ಪಾರ್ಚನೆ ಮಾಡುವ ಮೂಲಕ ಅದ್ದೂರಿಯಾಗಿ ಚಾಲನೆಗೊಂಡಿದೆ. 'ನಾಡ ಹಬ್ಬ' ಎಂದು ಆಚರಿಸಲಾಗುವ 11 ದಿನಗಳ ದಸರಾ ಅಥವಾ 'ಶರನ್ನವರಾತ್ರ' ಉತ್ಸವವು ಈ ವರ್ಷ ಕರ್ನಾಟಕದ ಶ್ರೀಮಂತ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಪ್ರದರ್ಶಿಸುವ ಜೊತೆಗೆ ಮೈಸೂರು ರಾಜಮನೆತನದ ವೈಭವವನ್ನು ನೆನಪಿಸುವ ಅದ್ದೂರಿ ಸಮಾರಂಭವಾಗಲಿದೆ.

ಉದ್ಘಾಟನಾ ಸಮಾರಂಭದಲ್ಲಿ ಬಾನು ಮುಷ್ತಾಕ್ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯ ಸಚಿವ ಸಂಪುಟದ ಹಲವು ಸಚಿವರು ಸೇರಿದಂತೆ ಮೈಸೂರು ಭಾಗದ ಶಾಸಕರು, ಅಧಿಕಾರಿಗಳು ಉಪಸ್ಥಿತರಿದ್ದರು. ಇದಕ್ಕೂ ಮುನ್ನ, ಬಾನು ಮುಷ್ತಾಕ್, ಮುಖ್ಯಮಂತ್ರಿ ಮತ್ತು ಇತರ ಗಣ್ಯರೊಂದಿಗೆ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

## ಮೈಸೂರಿನ ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ–ಆಪರೇಟಿವ್ ಸೊಸೈಟಿ : ಸರ್ವ ಸದಸ್ಯರ ವಾರ್ಷಿಕ ಮಹಾಸಭೆ




ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ ಆಪರೇಟಿವ್ ಸೊಸೈಟಿ ನಿಯಮಿತ, ಮೈಸೂರು ಇದರ 6ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ದಿನಾಂಕ : 22–09–2025ನೇ ಸೋಮವಾರ ಸಂಸ್ಥಾಪಕ ಅಧ್ಯಕ್ಷ ಶ್ರೀ ಎಸ್. ಚಂದ್ರಶೇಖರ್ ರವರ ನೇತೃತ್ವದಲ್ಲಿ ಉಪಾಧ್ಯಕ್ಷರಾದ ಎಂ.ಸಿ. ದೊಡನಾಯಕ ರವರ ಅಧ್ಯಕ್ಷತೆಯಲ್ಲಿ ಸೊಸೈಟಿಯ ಆವರಣದಲ್ಲಿ ನಡೆಯಿತು. ಹಾಗೂ ಈ ಸಂದರ್ಭದಲ್ಲಿ ನಿರ್ದೇಶಕರಾದ ರಾಜಶೇಖರ ಕದಂಬ, ಕೆ. ಹನುಮಂತೆ ಗೌಡ, ಚೆನ್ನಕೇಶವ, ಪ್ರವೀಣ್ ಕುಮಾರ್, ಎಂ.ಡಿ. ಪ್ರದೀಪ್, ಹೆಚ್. ಆರ್.ಮೂರ್ತಿ, ಜಿ.ಎನ್.ಮಂಜುನಾಥ್, ಆರ್.ರಮೇಶ್, ಯು.ಎಸ್.ರಮೇಶ್, ಆಶಾ ವಿ.ಆರ್, ಶಾಲಿನಿ ಸಿ.ಎಸ್, ಬಿ.ಎಸ್. ರಾಮಾರಾಧ್ಯ, ಬಿ.ಲೋಕೇಶ್ ಶೆಟ್ಟಿ, ಎನ್. ಮಂಜುನಾಥ್, ಗೋವಿಂದರಾಜು ಪಿ. ಹಾಗೂ ಕೃಷ್ಣಪ್ಪ ರವರು ಭಾಗಿಯಾಗಿದ್ದರು.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಆಡಳಿತ ಮಂಡಳಿ



ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಎಸ್. ಚಂದ್ರಶೇಖರ್
ಅಧ್ಯಕ್ಷರು



ಧರೇಪ್ಪ ಎಂ. ಆಲಗೂರ
ಉಪಾಧ್ಯಕ್ಷರು



ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು



ಎಂ.ಜೆ. ನರೇಂದ್ರಕುಮಾರ
ನಿರ್ದೇಶಕರು



ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಉಮೇಶ ಶಿ. ಬಾಳಿ
ನಿರ್ದೇಶಕರು



ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು



ಡಾ. ನಾಗೇಂದ್ರ ಡಿ.ಎಲ್.
ನಿರ್ದೇಶಕರು



ವೈ. ಶ್ರೀನಿವಾಸಗೌಡ
ನಿರ್ದೇಶಕರು



ಕೆ. ಜಗದೀಶ ಕಂದಿಕೆರೆ
ನಿರ್ದೇಶಕರು



ರಾಜೇಶ್ ಟಿ.
ನಿರ್ದೇಶಕರು



ಶಿವಕುಮಾರ ಬಸವರಾಜು ಬಾದವಾಡಗಿ
ನಿರ್ದೇಶಕರು



ಶಿವಾನಂದ ಬಸಪ್ಪ ನ್ಯಾಮಗೌಡ
ನಿರ್ದೇಶಕರು



ಹೆಚ್. ಅಶೋಕ್
ನಿರ್ದೇಶಕರು




ಚಂದ್ರಶೇಖರ್ ಕೋಲ್ಹಾರು
ನಿರ್ದೇಶಕರು



ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ


**SAHAKARA VARTHA PATHRIKE KANNADA MONTHLY**
RNI-Reg No.KARKAN/2018/75796
Post Reg No.KA-BGW/1816/2025-27
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 30th of Previous Month
License to post without prepayment
PMG BG/WPP-405/2025-27




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ಬೆಂಗಳೂರು ನಂ. 126 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



ಎಸ್. ಚಂದ್ರಶೇಖರ್
ಅಧ್ಯಕ್ಷರು

**ಅಂತರಾಷ್ಟ್ರೀಯ ಸಹಕಾರ ವರ್ಷ 2025ರ ಆಚರಣೆ ಜೊತೆಗೆ ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯದ ನಿರ್ದೇಶನದ ಮೇರೆಗೆ ಪ್ರಧಾನಿ ನರೇಂದ್ರ ಮೋದಿ ರವರ ಸಹಕಾರದಿಂದ ಸಮೃದ್ಧಿ ಪರಿಕಲ್ಪನೆಯನ್ನು ಸಾಗರಗೊಳಿಸಲು ಸಹಕಾರ ಸಂಘಗಳು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿವೆ.**

# ಸಹಕಾರ ಸಂಸ್ಥೆಗಳ ಆರ್ಥಿಕ ಬೆಳವಣಿಗೆ

ಪ್ರತಿ ವರ್ಷದಂತೆ ಸೆಪ್ಟಂಬರ್-25ಕ್ಕೆ ರಾಜ್ಯದ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳ ವಾರ್ಷಿಕ ಮಹಾಸಭೆಗಳು ಮುಗಿದಿದೆ. 2025-26ನೇ ಸಾಲಿನ ಗುರಿ ಸಾಧನೆಗಳ ಬಗ್ಗೆಯೂ ಪರಾಮರ್ಶಿಸಲಾಗಿದೆ. 2024-25ನೇ ಸಾಲಿನ ಸಹಕಾರ ಸಂಘಗಳ ವಾರ್ಷಿಕ ವರದಿಗಳನ್ನು ಅವಲೋಕಿಸಿದಾಗ ಸಂಸ್ಥೆಗಳಲ್ಲಿ ಸೇವೆಗಳ ವಿಸ್ತರಣೆ ಜೊತೆಗೆ ಲಾಭದಲ್ಲಿಯೂ ಹೆಚ್ಚಳ ಕಂಡುಬಂದಿರುತ್ತದೆ.

ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳು ಇಂಬು ನೀಡುತ್ತವೆ. ಲಾಭ ನಷ್ಟದ ಪ್ರಮಾಣವನ್ನು ವ್ಯಕ್ತಪಡಿಸುವುದಲ್ಲದೆ ಸಂಸ್ಥೆಗಳ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಸಹ ನೆರವಾಗಲಿದೆ.

ಕರ್ನಾಟಕ ರಾಜ್ಯದ 5000ಕ್ಕೂ ಅಧಿಕ ಪತ್ತಿನ ಸಹಕಾರ ಸಂಘಗಳಲ್ಲಿ ಬಹುತೇಕ ಸಹಕಾರ ಸಂಘಗಳು ಅತ್ಯುತ್ತಮ ಸಾಧನೆ ಮಾಡಿರುವುದಲ್ಲದೆ ಸಾಮಾಜಿಕ ಚಟುವಟಿಕೆಗಳಲ್ಲೂ ಭಾಗವಹಿಸುತ್ತಿರುವುದು ಸಂತೋಷದ ವಿಷಯವಾಗಿದೆ.

ಅಂತರಾಷ್ಟ್ರೀಯ ಸಹಕಾರ ವರ್ಷ 2025ರ ಆಚರಣೆ ಜೊತೆಗೆ ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯದ ನಿರ್ದೇಶನದ ಮೇರೆಗೆ ಪ್ರಧಾನಿ ನರೇಂದ್ರ ಮೋದಿ ರವರ ಸಹಕಾರದಿಂದ ಸಮೃದ್ಧಿ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಸಹಕಾರ ಸಂಘಗಳು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿವೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬೆಳವಣಿಗೆಯಲ್ಲಿ ಸಹಕಾರ ಸಂಸ್ಥೆಗಳ ಕೊಡುಗೆಯೂ ಇದೆ. ದೇಶದ ಪ್ರಮುಖ 10 ಸಹಕಾರ ಸಂಸ್ಥೆಗಳಲ್ಲಿ ಕರ್ನಾಟಕ ಹಾಲು ಮಹಾಮಂಡಳಿಯ ಕೊಡುಗೆಯೂ ಇದೆ. ನಮ್ಮ ರಾಜ್ಯದ ಸಹಕಾರ ಸಂಸ್ಥೆಗಳು ತಮ್ಮ ಸೇವೆಗಳನ್ನು ಮತ್ತಷ್ಟು ವಿಸ್ತರಿಸಿಕೊಳ್ಳಲು ಕೆಎಂಎಫ್ ನಂತಹ ಸಂಸ್ಥೆಗಳು ಮಾದರಿಯಾಗಿವೆ

ಅಕ್ಟೋಬರ್ ಮಾಹೆ ನಾಡಿನ ಜನರಿಗೆ ಸಂತಸದ ಮಾಸ. ವಿಶ್ವವಿಖ್ಯಾತ ಮೈಸೂರು ದಸರಾ, ವಿಜಯದಶಮಿ ಹಾಗೂ ದೀಪಾವಳಿ ಹಬ್ಬಗಳು ಸಾಂಸ್ಕೃತಿಕ ಮೆರುಗನ್ನು ಹೆಚ್ಚಿಸಲಿವೆ. ಸಮಸ್ತ ಸಹಕಾರಿ ಬಂಧುಗಳಿಗೆ ದಸರಾ – ದೀಪಾವಳಿಯ ಶುಭಾಶಯಗಳು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

ಸಂಪಾದಕ ಮಂಡಳಿ

ಅಧ್ಯಕ್ಷರು / ಪ್ರಧಾನ ಸಂಪಾದಕರು :

ಶ್ರೀ ಎಸ್. ಚಂದ್ರಶೇಖರ್

ಸಂಪಾದಕರು :

ಪ್ರಜ್ವಲ್ ಕೆ.ಎನ್.

ಮುಖ್ಯಕಾರ್ಯನಿರ್ವಹಣಾಧಿಕಾರಿ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು


ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಜೆಬಿ ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

ದೂರವಾಣಿ ಸಂಖ್ಯೆ : 080–23564444 / 23464033 / 23464034

ಇ–ಮೇಲ್ : info@ksccsf.org, ksccsfltd@gmail.com, ವೆಬ್ : www.ksccsf.org

## ಶ್ರೀ ಮೃತ್ಯುಂಜಯ ಅರ್ಬನ್ ಕೋ ಆಪ್ ಕ್ರೆಡಿಟ್ ಸೊಸಾಯಿಟಿ ಮಹಾಸಭೆ

## ಸಹಕಾರ ಸಂಘಗಳು ಅಬಲವರ್ಗಗಳ ಜನರ ಆರ್ಥಿಕ ಶಕ್ತಿಯಾಗಿವೆ : ಬಾಪುಗೌಡ ಡಿ. ಪಾಟೀಲ



**ಧಾರವಾಡ :** ಸಹಕಾರ ಸಂಘಗಳು ಅಬಲವರ್ಗಗಳ ಜನರ ಆರ್ಥಿಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರು ಹಾಗೂ ಶ್ರೀ ಮೃತ್ಯುಂಜಯ ಅರ್ಬನ್ ಕೋ ಆಪ್ ಕ್ರೆಡಿಟ್ ಸೊಸಾಯಿಟಿಯ ನಿರ್ದೇಶಕರಾದ ಬಾಪುಗೌಡ ಡಿ. ಪಾಟೀಲ ಅವರು ತಿಳಿಸಿದರು.

ಶ್ರೀ ಮೃತ್ಯುಂಜಯ ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸಾಯಿಟಿಯ 33ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಪ್ರಾಸ್ತಾವಿಕವಾಗಿ ಅವರು ಮಾತನಾಡಿದರು. ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಬಿ.ಎಲ್. ಶಿವಳ್ಳಿ ಅವರು ವಹಿಸಿ ಮಾತನಾಡುತ್ತಾ, 2024–25ನೇ ಸಾಲಿನಲ್ಲಿ ರೂ.8,59,545.32ಗಳ ನಿವ್ವಳ ಲಾಭಗಳಿಸಿದೆ ಎಂದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ಕಿರಣ ಎ. ರವರು 2024–25ನೇ ಸಾಲಿನ ವರದಿ ವಾಚಿಸಿದರು.


ಸಭೆಯಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಹಿರಿಯರಾದ ಎನ್.ಆರ್. ಬಾಳಿಕಾಯಿ, ಎಸ್.ಜಿ. ಪಾಟೀಲ, ಸುರೇಶ ಹಾಲಭಾವಿ, ಪುರುಷೋತ್ತಮ ಮಾಡಿಕರ, ಬಿ.ಎಸ್. ಶಿರೋಳ ಇವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ನಿರ್ದೇಶಕರುಗಳಾದ ಸಿ.ಎಸ್. ಪಾಟೀಲ, ಬಿ.ಎಸ್. ಕಪಲಿ, ಎಲ್.ಸಿ. ಕಬ್ಬೂರ, ಆಯ್. ಎಲ್. ಪಾಟೀಲ, ಜೆ.ಎಸ್. ಹೊಳೆಯಣ್ಣವರ, ಕೆ.ಎಚ್. ಗುರಿಕಾರ, ಎಂ.ವಾಯ್. ದೊಡಮನಿ ಉಪಸ್ಥಿತರಿದ್ದರು.

ಸಂಘದ ನಿರ್ದೇಶಕರಾದ ಪಾರ್ವತಿ. ಎಸ್.ಹಾಲಭಾವಿ ಪ್ರಾರ್ಥಿಸಿದರು. ಉಪಾಧ್ಯಕ್ಷರಾದ ಮಹಾದೇವಿ ಎಂ. ಕಲ್ಲೂರ ಸ್ವಾಗತಿಸಿದರು. ಜ್ಯೋತಿ ಎಸ್. ಭಾವಿಕಟ್ಟಿ ಸನ್ಮಾನಿತರನ್ನು ಪರಿಚಯಿಸಿದರು. ನಿರ್ದೇಶಕರಾದ ಅರವಿಂದ.ಎಸ್ ಕಪಲಿ ವಂದಿಸಿದರು. ನ್ಯಾಯವಾದಿ ಶಿವಾನಂದ ಭಾವಿಕಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

ಸೂಚನೆ :
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

## 26ನೇ ವರ್ಷದ ಸರ್ವ ಸದಸ್ಯರ ಸಭೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ




**ಬೆಂಗಳೂರು :** ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ನೌಕರರ ಪತ್ತಿನ ಸಹಕಾರ ಸಂಘದ ವತಿಯಿಂದ 26ನೇ ವರ್ಷದ ಸರ್ವ ಸದಸ್ಯರ ಸಭೆಯನ್ನು ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ನಗರದ ಸರ್. ಪುಟ್ಟಣ್ಣ ಶೆಟ್ಟಿ ಪುರಭವನ ಇಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕೇಂದ್ರೀಯ ವಿಭಾಗದ ನಿಯಂತ್ರಣಾಧಿಕಾರಿಗಳು ಆದ ಜಗದೀಶ್, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಡಾ॥ ನಾಗೇಂದ್ರ ಡಿ.ಎಲ್., ಸಂಘದ ಅಧ್ಯಕ್ಷ ಚಿಕ್ಕಬೈರಪ್ಪ, ಆಡಳಿತಮಂಡಳಿ ಸದಸ್ಯರುಗಳು ಮುಖ್ಯಕಾರ್ಯನಿರ್ವಹಣಾಧಿಕಾರಿ ಡಾ. ಬಿ.ಎಂ. ರಾಘವೇಂದ್ರರವರೊಂದಿಗೆ ಕಾರ್ಯಕ್ರಮ ಉದ್ಘಾಟಿಸಲಾಯಿತು.




## ಜಿ.ಬಿ. ಸರಗೂರು ಹಾಲು ಉತ್ಪಾದಕರ ಸಹಕಾರ ಸಂಘದಿಂದ ಅಭಿನಂದನೆ



ಜಿ.ಬಿ. ಸರಗೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣ ಹಾಗೂ ನಿರ್ದೇಶಕರುಗಳು ಮತ್ತು ಮುಖಂಡರಾದ ಶ್ರೀ ಗಿರೀಶ್ ರವರುಗಳು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಸ್. ಚಂದ್ರಶೇಖರ್ ರವರನ್ನು ಆತ್ಮೀಯವಾಗಿ ಅಭಿನಂದಿಸಿದರು.

# ಮಾನವನ ಆರ್ಥಿಕ ಬದುಕಿಗೆ ಊರುಗೋಲಾಗಿದ್ದು ಸಹಕಾರಿ ಕ್ಷೇತ್ರ

**ನವಲಗುಂದ** : "ಸಹಕಾರಿ ಕ್ಷೇತ್ರ ಆಲದ ಮರದ ರೀತಿ ಬೆಳೆದು ನಿಂತಿದೆ. ರಾಷ್ಟ್ರೀಕೃತ ಬ್ಯಾಂಕಗಳನ್ನು ಮೀರಿ ವ್ಯವಹರಿಸುತ್ತಿವೆ. ಮೊದಲು ಸಹಾಯ ನಂತರ ಕಾಗದ ಪತ್ರ, ಜಾಮೀನು ಎಂಬ ಸಿದ್ಧಾಂತ ಸಹಕಾರಿ ಕ್ಷೇತ್ರದ ಗುಣವಾಗಿದೆ. ಮನುಷ್ಯನ ವಿಶ್ವಾಸ, ಆತನ ಪರಿಸ್ಥಿತಿಗೆ ಸ್ಪಂದಿಸುವ ಮಾನವೀಯತೆಯ ವಲಯವೇ ಸಹಕಾರಿ ಕ್ಷೇತ್ರದ ಆದ್ಯತೆಯಾಗಿದೆ. ಶಿಕ್ಷಕರ ಈ ಸಂಸ್ಥೆ ಅದ್ಭುತ ಕೆಲಸ ಮಾಡಿದೆ.

ನವಲಗುಂದ ನರಗುಂದ ತಾಲೂಕಿನ ಶಿಕ್ಷಕರು ಸೇರಿ 5 ರೂ, 10, ರೂ ದಿಂದ ಪ್ರಾರಂಭ ಮಾಡಿ ಇಂದು 15,00,000 ರೂ. ವರೆಗೆ ಸದಸ್ಯರಿಗೆ ಸಾಲ ನೀಡುವ ಸಾಮರ್ಥ್ಯ ಹೊಂದಿರುವದು ಸಂಘದ ಯಶೋಗಾಥೆ ಯಾಗಿದೆ. ಕೋಟಿಗೂ ಮೀರಿದ ವ್ಯವಹಾರ ಮಾಡುತ್ತಿರುವದು ಸಹಕಾರಿ ರಂಗದಲ್ಲಿ ತನ್ನ ಹೆಜ್ಜೆಗುರುತು ಮೂಡಿಸಿದೆ.

ಸುಂದರವಾದ ಸಹಕಾರಿ ಭವನ ನಿರ್ಮಾಣ ಮಾಡಿ ಶಿಕ್ಷಕರ ಕುಟುಂಬಕ್ಕೂ, ಸಾರ್ವಜನಿಕರ ಸಭೆ. ಸಮಾರಂಭ, ಮಂಗಲಕಾರ್ಯಗಳಿಗೆ ನೆರವಾಗಿದೆ. ಇದೊಂದು ಅದ್ಭುತ ಬೆಳವಣಿಗೆ. ನೂರು ವರ್ಷ ಪೊರೈಸಿ ಶತಮಾನೋತ್ಸವ ಆಚರಿಸುತ್ತಿರುವುದು ಸಂತಸದ ಕ್ಷಣ. ಇದಕ್ಕೆ ಶ್ರಮಿಸಿದ ಎಲ್ಲಾ ಅಧ್ಯಕ್ಷರು, ನಿರ್ದೇಶಕರು, ಶಿಕ್ಷಕರು ಅಭಿನಂದನಾರ್ಹರು. ಎಂದು ಶಿರಹಟ್ಟಿ ಜಗದ್ಗುರು ದಿಂಗಾಲೇಶ್ವರ ಶ್ರೀಗಳು ಪ್ರಶಂಸಿದರು. ಪೂಜ್ಯರು ನವಲಗುಂದ ನಗರದ ಪ್ರಾಥಮಿಕ ಶಾಲಾ ಶಿಕ್ಷಕರ ಸಹಕಾರಿ ಪತ್ತಿನ ಸಂಘದ ಶತಮಾನೋತ್ಸವದ ಪಾವನ ಸಾನಿಧ್ಯವಹಿಸಿ ಆಶೀರ್ವಚನ ನೀಡಿ ಮಾತನಾಡಿದರು.

ಸುಳ್ಳದ ಪಂಚಗ್ರಹ ಹಿರೇಮಠದ ಪೂಜ್ಯರು ಸಾನಿಧ್ಯ ವಹಿಸಿ "ಸಂಘ ನಡೆದು ಬಂದ ದಾರಿ" ಕಿರು ಹೊತ್ತಿಗೆ ಲೋಕಾರ್ಪಣೆ ಮಾಡಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಡಾ. ಸಂಜಯ ಪಂಚಾಕ್ಷರಿ ಹೊಸಮಠ ಮಾತನಾಡುತ್ತಾ ಶಿಕ್ಷಕ–ಶಿಕ್ಷಕಿಯರು ಸಮಾಜದ ಬೆಳವಣಿಗೆಯ ದಾರಿದೀಪಗಳು. ಅವರ ಶ್ರೇಯೋಭಿವೃದ್ಧಿ ಹಾಗೂ ಆರ್ಥಿಕ ಭದ್ರತೆಗಾಗಿ ಶತಮಾನಕಾಲದ ನಿರಂತರ ಪ್ರಯಾಣ ನಡೆಸಿದ ಈ ಸಂಸ್ಥೆಯ ಸೇವೆ ಸಹಕಾರ ಚಳವಳಿಯ ಶ್ರೇಷ್ಠ ಮಾದರಿಯಾಗಿದೆ. ಗ್ರಾಮೀಣ ಭಾಗದಲ್ಲಿ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯ ಹಾದಿಯಲ್ಲಿ ಶಿಕ್ಷಕರ ಸಹಕಾರವು ಎಷ್ಟು ಮುಖ್ಯವೆಂಬುದನ್ನು ಸಂಸ್ಥೆಯು ತನ್ನ ಶತಮಾನ ಸೇವೆಯಿಂದ ಸಾಬೀತುಪಡಿಸಿದೆ.



ಸಹಕಾರ ತತ್ವವು 'ಒಬ್ಬರಿಗಾಗಿ ಎಲ್ಲರು, ಎಲ್ಲರಿಗಾಗಿ ಒಬ್ಬರು' ಎಂಬ ನಂಬಿಕೆಯಲ್ಲಿ ಅಡಗಿದೆ. ಈ ನಂಬಿಕೆಯನ್ನು ಜೀವಂತವಾಗಿ ಅನುಸರಿಸುತ್ತಾ, ಸಾವಿರಾರು ಶಿಕ್ಷಕ–ಶಿಕ್ಷಕಿಯರ ಕುಟುಂಬಗಳಿಗೆ ಭದ್ರತೆ, ನಂಬಿಕೆ ಹಾಗೂ ಆಶಾಕಿರಣ ತುಂಬಿದ ಕಾರ್ಯ ಈ ಸಂಸ್ಥೆಯ ಶ್ರೇಷ್ಠ ಸಾಧನೆ. ಸಹಕಾರ ತತ್ವವು ಕೇವಲ ಹಣಕಾಸಿನ ನೆರವಿನ ಮಟ್ಟಿಗೆ ಸೀಮಿತವಾಗದೆ, ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವ ಶಕ್ತಿ ಎಂದು ಈ ಶತಮಾನೋತ್ಸವವು ತೋರ್ಪಡಿಸಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಂಘದ ಅಧ್ಯಕ್ಷರಾದ ಗಣಪತಿ ವಸಂತ ಹೊಳೆಯಣ್ಣವರ ಅಧ್ಯಕ್ಷತೆ ವಹಿಸಿ ವಾರ್ಷಿಕ ವರದಿ ಮಂಡಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಪ್ರಭಾವತಿ ಶಂಕರ ಬ. ಪಾಟೀಲ ಮುನೇನಕೊಪ್ಪ ಹಾಗೂ ಡಾ॥ ಸಂಜಯ ಹೊಸಮಠ ನಿರ್ದೇಶಕರು ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ಬೆಂಗಳೂರು ಭಾಗವಹಿಸಿದ್ದರು. ಶ್ರೀಮತಿ ಎಸ್.ಬಿ. ಅಳಗವಾಡಿ ಪ್ರಾರ್ಥಿಸಿದರು. ಶ್ರೀ ಎಸ್. ಎಚ್.ಭಜಂತ್ರಿ ಸ್ವಾಗತಿಸಿದರು. ಶ್ರೀ ಜಿ.ವೈ. ಪಡಸುನಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಎಸ್.ಎಸ್. ಅಮಾತೆನ್ನವರ ನಿರೂಪಿಸಿದರು. ಸಂಘದ ಉಪಾಧ್ಯಕ್ಷರಾದ ಶ್ರೀ ಬಿ.ಕೆ. ಹಾಲವರ ವಂದಿಸಿದರು. ಇದೇ ಸಂಧರ್ಭದಲ್ಲಿ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ, ನಿವೃತ್ತ ಶಿಕ್ಷಕರಿಗೆ, ಸಂಘದ ಹಿರಿಯ ಸದಸ್ಯರಿಗೆ, ಪ್ರಶಸ್ತಿ ವಿಜೇತ ಶಿಕ್ಷಕರಿಗೆ, ನಿರ್ದೇಶಕರಿಗೆ, ಜಿಲ್ಲಾ ಶ್ರೇಷ್ಠ ಕೃಷಿಕ ಪ್ರಶಸ್ತಿ ಪುರಸ್ಕೃತರಾದ ಡಾ. ಶೌಕತ್ ಅಲಿ, ಲಂಬೂನವರ ಹಾಗೂ ಮಂಜುನಾಥ್, ಕಾಲವಾಡ ರೈತರಿಗೆ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕುಮಾರಿ ಮಹನ್ಯ ಪಾಟೀಲ ಇವರಿಂದ ಹಾಡು, ಮಿಮಿಕ್ರಿ ಕಲಾವಿದ ಶರಣು, ಯಮನೂರ ಇವರಿಂದ ನಗು ಹಬ್ಬ ಜರುಗಿತು.

ಈ ಸಂದರ್ಭದಲ್ಲಿ ನೌಕರ ಸಂಘದ ಅಧ್ಯಕ್ಷ ವ್ಹಿ ಡಿ. ರಂಗಣ್ಣವರ,ಎ. ಬಿ. ಕೊಪ್ಪದ, ಎಸ್ ಎಫ್ ನೀರಲಗಿ, ವ್ಹಿ.ಎಂ. ಹಿರೇಮಠ, ಎಂ.ಎನ್. ವಗ್ಗರ, ಎಲ್.ಬಿ. ಕಮತ, ಬಿ.ಎಂ. ಯಲಿಗಾರ, ಎನ್.ವೈ. ಕಳಸಾಪೂರ, ಎಲ್.ಎಂ. ನಾವಳ್ಳಿ, ವೆಂಕಟೇಶ ಭಜಂತ್ರಿ, ಎಚ್ ಎಸ್. ಚನ್ನಪ್ಪಗೌಡರ ಹಾಗೂ ಇತರರು ಉಪಸ್ಥಿತರಿದ್ದರು.

# ಸಹಕಾರ ಸಂಘದಲ್ಲಿ ಸೇವಾ ಮನೋಭಾವ ಮುಖ್ಯ : ಡಾ. ಸಂಜಯ ಹೊಸಮಠ



**ಬೆಳಗಾವಿ :** ಸಹಕಾರ ಸಂಸ್ಥೆ ಬೆಳೆಯ ಬೇಕಾದರೆ ಸೇವಾ ಮನೋಭಾವ ಹಾಗೂ ಅದನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿರಬೇಕು. ಅಚ್ಚುಕಟ್ಟಾದ ವ್ಯವಹಾರ ಇಟ್ಟುಕೊಂಡು ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ರಾಜ್ಯ ಸಹಕಾರ ಪತ್ತಿನ ಸಂಘದ ನಿರ್ದೇಶಕ ಡಾ. ಸಂಜಯ ಹೊಸಮಠ ಅಭಿಪ್ರಾಯಪಟ್ಟರು. ನಗರದ ಭಡಕಲ್ ಗಲ್ಲಿಯ ಶ್ರೀ ಬನಶಂಕರಿ ದೇವಸ್ಥಾನದ ಸಭಾಗೃಹದಲ್ಲಿ ನಡೆದ ಗುರು ವಿವೇಕಾನಂದ ವಿವಿಧೋದ್ದೇಶಗಳ ಸಹಕಾರಿ ಸಂಘದ 13ನೇ ವಾರ್ಷಿಕ ಸಾಮಾನ್ಯ ಸಭೆ ಹಾಗೂ ವಿದ್ಯಾರ್ಥಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಕ್ಷೇತ್ರದಲ್ಲಿ ಬೆಳಗಾವಿ ಮೊದಲ ಸ್ಥಾನ ಪಡೆದುಕೊಂಡಿದ್ದು, ಸಹಕಾರ ಸಂಘಗಳು ಬೆಳೆಯಬೇಕಾದರೆ ಅದರ ಆಡಳಿತ ಮಂಡಳಿ, ಸಿಬ್ಬಂದಿ ಅತ್ಯಂತ ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸಬೇಕು. ಹಣಕಾಸಿನ ವ್ಯವಹಾರ ಚೆನ್ನಾಗಿದ್ದರೆ ಜನರು ನಮ್ಮ ಬಳಿ ಬರುತ್ತಾರೆ. ಸಹಕಾರ ಸಂಘದಲ್ಲಿ ನಂಬಿಕೆ–ವಿಶ್ವಾಸ ಮುಖ್ಯ. ಅದನ್ನು ಕಾಪಿಟ್ಟುಕೊಂಡು ಸಾಗಬೇಕು. ಸಹಕಾರ ರಂಗವು ದೇಶದ ಆರ್ಥಿಕತೆಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ ಎಂದರು. ಸಮಾಜ ನಮಗೆ ಏನು ಕೊಟ್ಟಿದೆ ಎನ್ನುವುದಕ್ಕಿಂತ ಸಮಾಜಕ್ಕೆ ನಾವು ಏನನ್ನು ಕೊಡಬಲ್ಲೆವು ಎಂಬ ಅರಿವು ನಮ್ಮಲ್ಲಿರಬೇಕು. ವಿದ್ಯಾರ್ಥಿಗಳು ತಾವು ಕಲಿತ ಶಾಲೆ, ಶಿಕ್ಷಕರು, ಊರು, ಸಹಾಯ ಮಾಡಿದವರನ್ನು ಮರೆಯಬಾರದು. ಉತ್ತಮ ಶಿಕ್ಷಣ ಪಡೆದು ಸಮಾಜದಲ್ಲಿ ಉನ್ನತ ಹುದ್ದೆ ಪಡೆದು ಸತ್ಪ್ರಜೆಗಳಾಗಬೇಕು ಎಂದರು.

ಗುರು ವಿವೇಕಾನಂದ ಸಹಕಾರ ಸಂಘ ಕಡಿಮೆ ವರ್ಷದಲ್ಲಿಯೇ ದೊಡ್ಡ ಮಟ್ಟದಲ್ಲಿ ಬೆಳೆಯುತ್ತಿದೆ. ವಿವೇಕಾನಂದರ ತತ್ವ ಸಿದ್ಧಾಂತ ಇಟ್ಟುಕೊಂಡು ಸಂಸ್ಥೆ ಉತ್ತಮವಾಗಿ ಬೆಳೆಯುತ್ತಿದೆ. ಸಂಸ್ಥೆ ಕೇವಲ ಒಬ್ಬ ಸದಸ್ಯನಿಗೆ ಆರ್ಥಿಕವಾಗಿ ಸಹಾಯ ಮಾಡದೇ ಇಡೀ ಆ ಕುಟುಂಬಕ್ಕೆ ಆಶ್ರಯ ನೀಡಿದೆ. ಇದೇ ರೀತಿಯ ದೃಢ ಸಂಕಲ್ಪದೊಂದಿಗೆ ಮುಂದೆ ಸಾಗಿದರೆ, ಮುಂದೆ ಬಹುದೊಡ್ಡ ಸಂಸ್ಥೆಯಾಗಿ ಬೆಳೆದು ಇತರ ಸಂಸ್ಥೆಗಳಿಗೆ ಮಾದರಿಯಾಗಲಿದೆ ಎಂದು ಹೇಳಿದರು. ಸಂಘದ ಅಧ್ಯಕ್ಷ ಡಾ. ನಾರಾಯಣ ನಾಯ್ಕ ಅಧ್ಯಕ್ಷತೆ ವಹಿಸಿ ಮಾತನಾಡಿ, ಉತ್ತಮ ಸಂಸ್ಥೆಯನ್ನು ಕಟ್ಟುವಾಗ ಅನೇಕ ಜನರ ಯೋಗದಾನವಿರುತ್ತದೆ. ಅದರಲ್ಲಿ ಸಂಸ್ಥೆಯ ಗ್ರಾಹಕರಿಂದ ಹಿಡಿದು ಸಂಸ್ಥೆಯಲ್ಲಿರುವ ಸಿಬ್ಬಂದಿ, ಆಡಳಿತ ಮಂಡಳಿಯವರ ಕಾರ್ಯತತ್ಪರತೆ, ಸದಸ್ಯರ ಸಕರಾತ್ಮಕ ಪಾಲ್ಗೊಳ್ಳುವಿಕೆಯು ಪ್ರಧಾನವಾಗಿದೆ. ಸಂಸ್ಥೆ ನಮ್ಮ ಆಸ್ತಿಯಲ್ಲ, ಅದು ಸಮಾಜದ ಆಸ್ತಿಯೆಂದು ತಿಳಿದಿರಬೇಕು. ವ್ಯಕ್ತಿ ಶಾಶ್ವತವಲ್ಲ, ಸಂಸ್ಥೆ ಶಾಶ್ವತ. ನಾವು ಕಟ್ಟುವ ಸಂಸ್ಥೆ ಸಾರ್ವಕಾಲಿಕ ವಾಗಿರುವಂತೆ ನಮ್ಮ ನಡೆನುಡಿ ಇರಬೇಕು ಎಂದರು.

ವಿವೇಕಾನಂದರ ತತ್ವಾದರ್ಶ ಪಾಲಿಸುವ ಉದ್ದೇಶದಿಂದ ಈ ಸಂಘವನ್ನು ಕಟ್ಟಿದ್ದೇವೆ. ಅದಕ್ಕೆ ತಕ್ಕಂತೆ ಸಂಸ್ಥೆ ಆರ್ಥಿಕವಾಗಿ, ಸಾಮಾಜಿಕವಾಗಿ ಸೇವೆ ಸಲ್ಲಿಸುತ್ತಿದೆ. ಸಂಘವು ಆರಂಭದಿಂದ ಇಲ್ಲಿಯವರೆಗೆ ಎ ಗ್ರೇಡ್ ಮಾನ್ಯತೆ ಪಡೆದಿದೆ. ಇದು ಸಂಸ್ಥೆಯ ಕಾರ್ಯವೈಖರಿಯನ್ನು ತೋರಿಸುತ್ತದೆ. 2024–25ರಲ್ಲಿ 21.10 ಕೋಟಿ ರೂ. ದುಡಿಯುವ ಬಂಡವಾಳ, 2.65 ಕೋಟಿ ರೂ. ನಿಧಿಗಳು, 2136 ಸದಸ್ಯರು, 73.6 ಲಕ್ಷ ಷೇರು ಬಂಡವಾಳ, 15.75 ಕೋಟಿ ರೂ. ಸಾಲ, 47.17 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ. ಸದಸ್ಯರಿಗೆ ಶೇ. 12ರಷ್ಟು ಲಾಭಾಂಶ ಕೊಡಲು ತೀರ್ಮಾನಿಸಿದ್ದೇವೆ ಎಂದರು. ಸಮಕಾಲೀನ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ಮನಸ್ಸನ್ನು ನಿಯಂತ್ರಣದಲ್ಲಿಡುವುದೇ ದೊಡ್ಡ ಸವಾಲಾಗಿದೆ. ಮನಸ್ಸು ಪರಿಶುದ್ಧವಾದಾಗ, ಭಾವನೆಗಳು ಪರಿಶುದ್ಧವಾಗಿರುತ್ತವೆ. ಭಾವನೆಗಳು ಪರಿಶುದ್ಧವಾದಾಗ ವಿಚಾರಧಾರೆಗಳು ಪರಿಶುದ್ಧವಾಗಿರುತ್ತವೆ. ವಿಚಾರಧಾರೆಗಳು ಪರಿಶುದ್ಧವಾದಾಗ ನಮ್ಮಿಂದ ಸತ್ಕಾರ್ಯ ಮಾಡಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಜ್ಞಾನದ ಹಿಂದೆ ಹೋಗಬೇಕು. ಜ್ಞಾನದ ಹಸಿವು ವಿದ್ಯಾರ್ಥಿಗಳನ್ನು ಬದುಕಿನ ಔನ್ನತ್ಯಕ್ಕೆ ಒಯ್ಯುತ್ತದೆ ಎಂದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 624 ಅಂಕ ಪಡೆದ ಸಾವಿತ್ರಿ ರೋಣಿ, 623 ಅಂಕ ಪಡೆದ ಸಮೃದ್ಧಿ ಮೂಲ್ಯ ಹಾಗೂ ಕರಾಟೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಸೌಮ್ಯ ಶೆಟ್ಟಿ ಅವರನ್ನು ಸತ್ಕರಿಸಲಾಯಿತು. ಸಂಘದ ಸದಸ್ಯರ 34 ಪ್ರತಿಭಾವಂತ ಮಕ್ಕಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಸಂಘದ ಉಪಾಧ್ಯಕ್ಷ ಆನಂದ ರಾವ್, ನಿರ್ದೇಶಕರಾದ ಅಂಜನಕುಮಾರ ಗಂಡಗುದರಿ, ಸತೀಶ ಮನ್ನಿಕೇರಿ, ಆನಂದ ಶೆಟ್ಟಿ, ಗಣೇಶ ಮರಕಲ, ದುರ್ಗಪ್ಪ ತಳವಾರ, ರೂಪಾ ಮಗದುಮ್ಮ, ಗಣೇಶ ನಾಯಕ, ಚಂದ್ರಕ್ರಾಂತ ಅಥಣಿಮಠ ಸೇರಿದಂತೆ ಸಂಘದ ಸಿಬ್ಬಂದಿ, ಪಿಗ್ಮಿ ಸಂಗ್ರಹಕಾರರು, ಸದಸ್ಯರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ನಿರ್ದೇಶಕರಾದ ಭಾರತಿ ಶೆಟ್ಟಿಗಾರ, ರಾಜೇಶ ಗೌಡ ಮಾತನಾಡಿದರು. ಸಂಘದ ಕಾರ್ಯದರ್ಶಿ ವಿಶಾಲ್ ಪಾಟೀಲ ವರದಿ ವಾಚಿಸಿದರು. ಭೈರೋಬಾ ಕಾಂಬಳೆ ಸ್ವಾಗತಿಸಿದರು. ಭಾವನಾ ಬುದಲಿ ಪ್ರಾರ್ಥಿಸಿದರು. ಸಮ್ಮೇದ ಗಾಡೇಕರ ವಂದಿಸಿದರು. ಭಡಕಲ್ ಗಲ್ಲಿಯ ಶ್ರೀ ಬನಶಂಕರಿ ದೇವಸ್ಥಾನದ ಸಭಾಭವನದಲ್ಲಿ ಗುರು ವಿವೇಕಾನಂದ ವಿವಿಧೋದ್ದೇಶಗಳ ಸಹಕಾರಿ ಸಂಘದ 13ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

# ಮಹಾರಾಜಾ ಅಗ್ರಸೇನ ಅರ್ಬನ್ ಕೊ-ಆಪ್ ಕ್ರೆಡಿಟ್ ಸೊಸಾಯಿಟಿಗೆ ರೂ.65.04 ಲಕ್ಷ ಲಾಭ




**ಹುಬ್ಬಳ್ಳಿ :** ಮಹಾರಾಜಾ ಅಗ್ರಸೇನ ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸಾಯಿಟಿ ಲಿ., ಇದರ 16ನೇ ವಾರ್ಷಿಕ ಸರ್ವ ಸಾಧಾರಣ ಸಭೆಯು ದಿನಾಂಕ : 13/09/2025 ರಂದು ಶನಿವಾರ ಶ್ರೀ ಅಗ್ರಸೇನ ಭವನ, ವಾಳ್ವೇಕರ ಗಲ್ಲಿ, ಹುಬ್ಬಳ್ಳಿಯಲ್ಲಿ ಸೊಸಾಯಿಟಿಯ ಅಧ್ಯಕ್ಷರಾದ ಶ್ರೀ ಅಮಿತ ವಿಜಯಕುಮಾರ ಮಹಾಜನ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಅಧ್ಯಕ್ಷರಾದ ಶ್ರೀ ಅಮಿತ ವಿಜಯಕುಮಾರ ಮಹಾಜನರವರು ಮಾತನಾಡಿ, ಮಹಾರಾಜಾ ಅಗ್ರಸೇನ ಸೊಸಾಯಿಟಿಯು ಸದಸ್ಯರುಗಳ ಸಹಕಾರದಿಂದ ಅಭಿವೃದ್ಧಿ ಹೊಂದುತ್ತಿದ್ದು, ದಿನಾಂಕ : 31/03/2025ಕ್ಕೆ ರೂ. 47.07 ಕೋಟಿ ದುಡಿಯುವ ಬಂಡವಾಳ, ರೂ. 34.30 ಕೋಟಿ ಠೇವಣಿ, ಅಲ್ಲದೆ, ರೂ. 10.94 ಕೋಟಿ ಸಾಲ ನಿಡಿದ್ದು, ರೂ.65.04 ಲಕ್ಷ ಲಾಭ ಗಳಿಸಿದೆ ಎಂದು ತಿಳಿಸಿದರು. ಸೊಸಾಯಿಟಿಗೆ ದೊರಕಿದ ಕರ್ನಾಟಕ ರಾಜ್ಯ ಸಹಕಾರ ಇಲಾಖೆಯಿಂದ "ಅತ್ಯುತ್ತಮ ಸಹಕಾರ ಸಂಘ" ಪ್ರಶಸ್ತಿ ಬಗ್ಗೆ ತಿಳಿಸಿದರು. ಅಲ್ಲದೆ ಸೊಸಾಯಿಟಿಯ ಬೆಳವಣಿಗೆಗೆ ತಮ್ಮೆಲ್ಲರ ಸಹಕಾರ ಮತ್ತು ವಿಶ್ವಾಸವೇ ಕಾರಣ ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ನಮ್ಮ ಸೊಸಾಯಿಟಿಯು ಹೆಚ್ಚಿನ ಅಭಿವೃದ್ಧಿ ಹೊಂದಿ ಧಾರವಾಡ ಜಿಲ್ಲೆಗೆ ಒಂದು ಮಾದರಿ ಸಂಸ್ಥೆಯಾಗಿ ಬೆಳೆಯುತ್ತದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಶೀಮತಿ ಗೀತಾ ಎಸ್ ಕುಂಬಿ, ಉಪಾಧ್ಯಕ್ಷರು ಧಾರವಾಡ ಜಿಲ್ಲಾ ಸಹಕಾರಿ ಯೂನಿಯನ್ ನಿಯಮಿತ, ಧಾರವಾಡ ಇವರು ಮಾತನಾಡಿ, ಸೊಸಾಯಿಟಿಯು ಧಾರವಾಡ ಜಿಲ್ಲೆಯಲ್ಲಿಯೆ ಒಂದು ಮಾದರಿ ಸಹಕಾರ ಸಂಘವಾಗಿದೆ. ಅಲ್ಪ ಅವಧಿಯಲ್ಲಿ ರೂ. 47.07 ಕೋಟಿ ದುಡಿಯುವ ಬಂಡವಾಳ ಹೊಂದಿ ರೂ. 65.04 ಲಕ್ಷ ಲಾಭ ಮಾಡಿದ್ದು ಸಂತೋಷದ ವಿಷಯ ಎಂದು ತಿಳಿಸಿದರು. ಇದಕ್ಕೆಲ್ಲ ಆಡಳಿತ ಮಂಡಳಿಯ ನಿಸ್ವಾರ್ಥ ಸೇವೆ ಹಾಗೂ ಸದಸ್ಯರ ಸಹಕಾರವೇ ಕಾರಣ ಎಂದು ತಿಳಿಸಿದರು.

ಸೊಸಾಯಿಟಿಯ ಉಪಾಧ್ಯಕ್ಷರಾದ ಶ್ರೀ ಭರತಭೂಷಣ ಬನ್ಸಲರವರು 2024–25ನೇ ಸಾಲಿನ ಲಾಭ–ಹಾನಿ ಪತ್ರಿಕೆ ಹಾಗು ಅಢಾವೆ ಪತ್ರಿಕೆ ವಿವರ ನೀಡಿದರು, ಶ್ರೀ ಮುಕೇಶ ಎಲ್ ಅಗ್ರವಾಲ 2024–25 ನೇ ಸಾಲಿನ ನಿವ್ವಳ ಲಾಭಾಂಶ ವಿಲೇವಾರಿ ಹಾಗೂ ಡಿವ್ಹಿಡೆಂಡ 11%, ಘೋಷಿಸಿದರು.

ನಿರ್ದೇಶಕರಾದ ಶ್ರೀಮತಿ ಅನಿತಾ ಎಸ್ ಮಹಾಜನ 2024–25ನೇ ಸಾಲಿನ ಬಜೆಟ್ ಮಂಡಿಸಿ ನಿಧಿಗಳ ಬಳಕೆ ಕುರಿತು ವಿವರಿಸಿದರು, ಶ್ರೀ ಸುಜಿತ ಯಾದುಕಾರವರು ಮುಂದಿನ ವರ್ಷದ ಕ್ರೀಯಾ ಯೋಜನೆ, ಶ್ರೀ ಕೇದಾರ ಆರ್ ಅಗ್ರವಾಲ ಸದಸ್ಯರ ವ್ಯವಹಾರಿಕ ಜವಾಬ್ದಾರಿ ಕುರಿತು ತಿಳಿಸಿದರು. ಸೊಸಾಯಿಟಿಯ ವ್ಯವಸ್ಥಾಪಕರಾದ ಶ್ರೀ ಎಲ್. ಎಸ್. ಬೋಗಾರರವರು ಕಳೆದ ವಾರ್ಷಿಕ ನಡುವಳಿಕೆಗಳನ್ನು ಹಾಗೂ ಆಡಿಟ್ ವರದಿಗೆ ಅನುಪಾಲನಾ ವರದಿ ಮಂಡಿಸಿದರು, ಶ್ರೀ ಅಶೋಕಕುಮಾರ ಪಿ ಮಹಾಜನ ಸಭೆಯನ್ನು ನಡೆಸಿಕೊಟ್ಟರು.


ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಸುಭಾಶ ಆರ್ ಮಹಾಜನ ಮಾತನಾಡಿ, ಹೊಸದಾಗಿ ಅಮಿತ ವಿಜಯಕುಮಾರ ಮಹಾಜನ, ಅಧ್ಯಕ್ಷರು, ಶ್ರಿ ಭರತಭೂಷಣ ಬನ್ಸಲ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು ಅವರಿಗೆ ಅಭಿನಂದನೆ ಸೂಚಿಸಿದರು. ಸೊಸಾಯಿಟಿಯ ಅಭಿವೃದ್ದಿಗೆ ಹಲವಾರು ಕ್ರೀಯಾ ಯೋಜನೆ ಹಾಕಿದ್ದು ಅವುಗಳನ್ನು ಕಾರ್ಯರೂಪಕ್ಕೆ ತರುತ್ತೇವೆ ಎಂದು ತಿಳಿಸಿದರು. ಶ್ರೀ ಸುರೇಶ ಪಿ ಅಗರವಾಲರವರು ವಂದನಾರ್ಪಣೆ ಮಾಡಿದರು.

# ನಾಡಿನಾದ್ಯಂತ ಬೆಳಕಿನ ಹಬ್ಬ ದೀಪಾವಳಿಯ ಸಂಭ್ರಮ

ಬೆಳಕಿನ ಹಬ್ಬ ದೀಪಾವಳಿಯು ಹಿಂದೂಗಳ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ. ಇದನ್ನು ಪ್ರಪಂಚದಾದ್ಯಂತ ಬಹಳ ವೈಭವ ಮತ್ತು ಉತ್ಸಾಹದಿಂದ ಆಚರಿಸಲಾಗುತ್ತದೆ. ಇದು ದೀಪಗಳು ಮತ್ತು ಸಂತೋಷದ ಹಬ್ಬ. ಪಂಚಾಂಗದ ಪ್ರಕಾರ, ದೀಪಾವಳಿ ಹಬ್ಬವನ್ನು ಕಾರ್ತಿಕ ಮಾಸದ ಅಮವಾಸ್ಯೆಯ ತಿಥಿಯಂದು ಆಚರಿಸಲಾಗುತ್ತದೆ. ಚೋಟಿ ದೀಪಾವಳಿಯನ್ನು ಕಾರ್ತಿಕ ಮಾಸದ ಕೃಷ್ಣ ಪಕ್ಷದ ಚತುರ್ದಶಿ ತಿಥಿಯಂದು ಆಚರಿಸಲಾಗುತ್ತದೆ. ಪ್ರತಿವರ್ಷವೂ ವರ್ಷ, ಇಡೀ ಹಿಂದೂ ಸಮುದಾಯವು ಸಡಗರ ಸಂಭ್ರಮದ, ಭಕ್ತಿಭಾವದಿಂದ ದೀಪಾವಳಿ ಹಬ್ಬದ ಆಚರಿಸುತ್ತದೆ.

ಹಿಂದೂ ಶಾಸ್ತ್ರಗಳ ಪ್ರಕಾರ, ದೀಪಾವಳಿ ದಿನವು ದುಷ್ಟತನದ ಮೇಲೆ ವಿಜಯೋತ್ಸವವನ್ನು ಆಚರಿಸುತ್ತದೆ. ಈ ದಿನವು ಹಿಂದೂಗಳಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಮಹತ್ವವನ್ನು ಹೊಂದಿದೆ. ಜನರು ಮನೆಗಳು, ಬೀದಿಗಳು, ದೇವಾಲಯಗಳನ್ನು ಬೆಳಗಿಸಿ ಈ ದಿನವನ್ನು ಬಹಳ ಉತ್ಸಾಹದಿಂದ ಆಚರಿಸುತ್ತಾರೆ. ದೀಪಾವಳಿ ಕತ್ತಲೆಯ ಮೇಲೆ ಬೆಳಕಿನ ವಿಜಯವನ್ನು ಪ್ರತಿನಿಧಿಸುತ್ತದೆ. ಈ ಶುಭ ದಿನದಂದು, ಗಣೇಶ, ಕುಬೇರ ಮತ್ತು ಲಕ್ಷ್ಮಿ ಮಾತೆಯನ್ನು ಅಪಾರ ಭಕ್ತಿ ಮತ್ತು ಸಮರ್ಪಣೆಯಿಂದ ಪೂಜಿಸಲಾಗುತ್ತದೆ.

ದೀಪಾವಳಿ ಹಬ್ಬದ ಅಚರಣೆ ಸಮಯದಲ್ಲಿ ಉಡುಗೊರೆಗಳು, ಸಿಹಿ ತಿಂಡಿಗಳನ್ನು ಆಪ್ತೇಷ್ಟರಿಗೆ ಹಂಚುವುದು ಸಾಮಾನ್ಯವಾಗಿದೆ. ಹಬ್ಬದ ದಿನ ಪರಸ್ಪರ ಶುಭಾಶಯಗಳನ್ನು ಕೋರುವುದು ಕುಟುಂಬದ ಹಿರಿಯರ ಆಶೀರ್ವಾದ ಪಡೆಯುವುದು ಮೊದಲಿನಿಂದಲೂ ನಡೆದುಕೊಂಡು ಬಂದ ಆಚರಣೆಯಾಗಿದೆ.



ಮನೆಯನ್ನು ಸುಂದರವಾಗಿ ಅಲಂಕರಿಸಿ, ದೀಪಗಳನ್ನು ಹಚ್ಚಿ, ಪಟಾಕಿ ಸಿಡಿಸಿ ಅತ್ಯಂತ ಸಡಗರ ಸಂಭ್ರಮದಿಂದ ದಾನ ಶೂರ ಬಲಿ ಚಕ್ರವರ್ತಿಯನ್ನು ಭೂಮಿಗೆ ಸ್ವಾಗತಿಸುವುದು ಹಬ್ಬದ ವಿಶೇಷವಾಗಿದೆ. ಅದೇ ಪ್ರಕಾರ ಲಕ್ಷ್ಮೀ ಪೂಜೆ ಮಾಡಿ ಉಡುಗೊರೆಗಳನ್ನು ಹಂಚುವುದು



ದೀಪಾವಳಿ ಹಬ್ಬದ ಪ್ರಮುಖ ಆಚರಣೆಯಾಗಿದೆ.

**ನೈಸರ್ಗಿಕ ಆಚರಣೆಗೆ ಒತ್ತು :** ಸುಂದರವಾದ ರಂಗೋಲಿಗಳು ಹಬ್ಬದ ಕಳೆಯನ್ನು ಹೆಚ್ಚಿಸುತ್ತವೆ. ಆದರೆ ರಂಗೋಲಿಗೆ ಬಳಸುವ ವಿಷಕಾರಿ ಕೃತಕ ಪುಡಿಗಳಿಗೆ ನೋ ಎನ್ನಿ. ಸಾಧ್ಯವಾದಷ್ಟು ನೈಸರ್ಗಿಕ ವಸ್ತುಗಳಿಂದ ಮಾಡಿದ ರಂಗೋಲಿ ಪುಡಿಗಳನ್ನು ಬಳಸಿ ಎನ್ನುತ್ತಾರೆ ಗೃಹಿಣಿ ಸುಜಾತ.

ರಂಗೋಲಿಗೆ ನೈಸರ್ಗಿಕ ಪುಡಿಗಳನ್ನೆ ಬಳಸಿ ಅಂದರೆ ಹಳದಿ ಬಣ್ಣಕ್ಕೆ ಅರಶಿಣವನ್ನು, ಬಿಳಿ ಬಣ್ಣಕ್ಕೆ ಅಕ್ಕಿ ಹಿಟ್ಟನ್ನು, ಕಂದು ಬಣ್ಣಕ್ಕೆ ಕಾಫಿ ಪುಡಿ ಮತ್ತು ಕೆಂಪು ಬಣ್ಣಕ್ಕೆ ಕುಂಕುಮವನ್ನು ಬಳಸುವುದು ಉತ್ತಮ. ವರ್ಣರಂಜಿತ ನೈಸರ್ಗಿಕ ಲುಕ್‌ಗೆ ಹೂವಿನ ಪಕಳೆಗಳು ಮತ್ತು ಎಲೆಗಳನ್ನು ಬಳಸುವುದು ಒಳ್ಳೆಯದು ಇಂಥ ರಂಗೋಲಿಗಳು ನೋಡಲು ಕೂಡಾ ಚೆನ್ನಾಗಿರುತ್ತವೆ. ಹಬ್ಬ ಮುಗಿದ ಮೇಲೆ ಇವುಗಳನ್ನು ಸುಲಭವಾಗಿ ತೆಗೆದು ಕಾಂಪೋಸ್ಟ್ ಬಿನ್‌ಗೆ ಹಾಕಬಹುದು.

ದೀಪಾವಳಿ ಹಬ್ಬದ ಅಂಗವಾಗಿ ಮಕ್ಕಳು ಸಹಿತ ಮನೆಮಂದಿಯೆಲ್ಲಾ ಮೈಗೆ ಎಣ್ಣೆ ಹಚ್ಚಿ ಬಿಸಿನೀರಿನ ಅಭ್ಯಂಜನ ಮಾಡಿಕೊಂಡು ಹೊಸ ಬಟ್ಟೆ ಧರಿಸಿ ಬೆಳಕನ್ನು ನೋಡಿ ಮನೆಯ ಹಿರಿಯ ಆಶೀರ್ವಾದ ಪಡೆದು ವಾಡಿಕೆ. ಕುಟುಂಬ ಸದಸ್ಯರೆಲ್ಲ ಜೊತೆಯಾಗಿ ಹಬ್ಬದ ಸಿಹಿ ತಿಂಡಿ ಸೇವಿಸುವುದು, ಬಂದು ಬಾಂಧವರಿಗೆ ಸಿಹಿ ತಿಂಡಿ ಹಂಚುವುದು ಹಬ್ಬದ ಪ್ರಮುಖ ಅಂಗವಾಗಿದೆ.

**ಪ್ಲಾಸ್ಟಿಕ್ ಬಳಕೆ ಬೇಡ :** ದೀಪಾವಳಿಗೆ ಹೆಚ್ಚಿನವರು ಪ್ಲಾಸ್ಟಿಕ್‌ನಿಂದ ಮಾಡಿದ ಅಲಂಕಾರಿಕ ವಸ್ತುಗಳನ್ನು ಬಳಸುತ್ತಾರೆ. ಪ್ಲಾಸ್ಟಿಕ್‌ನ ಹೂವು, ಬೌಲ್, ತೋರಣ, ಪ್ಲಾಸ್ಟಿಕ್‌ನ ಗಿಫ್ಟ್ ಐಟಂ ಇತ್ಯಾದಿಗಳು. ಪ್ಲಾಸ್ಟಿಕ್‌ಮಯವಾಗಿರುತ್ತವೆ. ಆದರೆ ಈ ಪ್ಲಾಸ್ಟಿಕ್‌ಗಳು ಮಣ್ಣಿನಲ್ಲಿ ಕರಗುವುದಿಲ್ಲ. ಪರಿಸರಕ್ಕೆ ಹಾನಿಯುಂಟು ಮಾಡುವ ಇಂಥ ಡೆಕೋರ್ ಆ್ಯಕ್ಸೆಸರಿಗಳಿಂದ ದೂರವಿರಿ. ಹೂವು, ಎಲೆ, ಮಣ್ಣಿನ ಕಲಾಕೃತಿಗಳು ಮುಂತಾದ ನೈಸರ್ಗಿಕ ಅಲಂಕಾರಿಕ ವಸ್ತುಗಳನ್ನು ಬಳಸಿ. ಕೆಲವರು ಅತಿಥಿಗಳಿಗೆ ಡಿಸ್ಪೋಸೇಬಲ್ ಪ್ಲಾಸ್ಟಿಕ್ ಪ್ಲೇಟ್‌ಗಳಲ್ಲಿ ಊಟ ಬಡಿಸುತ್ತಾರೆ. ಇದಕ್ಕಿಂತ ಎಲೆಯಿಂದ ಮಾಡಿದ ನ್ಯಾಚುರಲ್ ಪ್ಲೇಟ್‌ಗಳಲ್ಲಿ ಊಟ ನೀಡಿದರೆ ಉತ್ತಮ.

**ಪಟಾಕಿಗೆ ಪರ್ಯಾಯ ಹಸಿರು ಪಟಾಕಿ :** ವಿವಿಧ ರೀತಿಯ ಪಟಾಕಿಗಳು ಪರಿಸರಕ್ಕೆ ತೀರಾ ಹಾನಿಯನ್ನುಂಟು ಮಾಡುತ್ತವೆ. ಇದರ ಹೊಗೆ ಮತ್ತು




ರಾಸಾಯನಿಕ ವಸ್ತು ಬೆರೆತ ದಪ್ಪ ಕಾಗದಗಳು ಪರಿಸರಕ್ಕೆ ಒಳ್ಳೆಯದಲ್ಲ. ಆದ್ದರಿಂದ ಪಟಾಕಿಗೆ ನೋ ಎಂದರೆ ಒಳ್ಳೆಯದು. ಇದರ ಬದಲು ದೀಪಗಳನ್ನು ಬೆಳಗಿಸಿ. ಪಟಾಕಿ ಹೊಡೆಯಲೇ ಬೇಕಿದ್ದರೆ ಪುನರ್ ಬಳಕೆಗೆ ಯೋಗ್ಯವಾದ ಪೇಪರ್‌ಗಳಿಂದ ಮಾಡಿದ ಇಕೊ ಫ್ರೆಂಡ್ಲಿ ಪಟಾಕಿಗಳನ್ನು ಸಿಡಿಸಿ. ಅತ್ಯಂತ ಕಡಿಮೆ ಪ್ರಮಾಣದಲ್ಲಿ ಪಟಾಕಿ ಖರೀದಿಸಿ.

**ಮಣ್ಣಿನ ಹಣತೆ ಬೆಳಗಿಸಿ :** ಹಬ್ಬಕ್ಕೆ ಬಣ್ಣ ಬಣ್ಣದ ಕ್ಯಾಂಡಲ್‌ಗಳನ್ನು ಬೆಳಗಿಸುವುದಕ್ಕಿಂತ ಮಣ್ಣಿನ ಹಣತೆಯಲ್ಲಿ ಎಣ್ಣೆ ಹಾಕಿ ದೀಪ ಬೆಳಗಿಸಿ. ಮಣ್ಣಿನ ಹಣತೆಗಳನ್ನು ಮತ್ತೆ ಮತ್ತೆ ಬಳಸಬಹುದು. ಇದನ್ನು ಪರಿಸರ ಸ್ನೇಹಿ ವಸ್ತುಗಳಿಂದಲೇ ತಯಾರಿಸಲಾಗುತ್ತದೆ. ಇದೇ ರೀತಿ ತೀಕ್ಷ್ಣವಾದ ರಾಸಾಯನಿಕ ಬಣ್ಣಗಳನ್ನು ಹಚ್ಚಿದ ಹಣತೆಗಳನ್ನು ಕೊಳ್ಳಬೇಡಿ. ಪೆಟ್ರೋಲಿಯಂ ಬಳಸಿ ಮಾಡುವ ಕ್ಯಾಂಡಲ್‌ಗಳು ವಿಷಕಾರಿ ವಸ್ತುಗಳನ್ನು ವಾತಾವರಣಕ್ಕೆ ಬಿಡುಗಡೆ ಮಾಡುತ್ತವೆ. ಇವುಗಳಿಗೂ ನೋ ಎನ್ನಿ. ಮನೆ ಮುಂದೆ ತೂಗು ಹಾಕುವ ಆಕಾಶಬುಟ್ಟಿಯೂ ಪರಿಸರ ಸ್ನೇಹಿಯಾಗಿರಲಿ. ಪುನರ್ ಬಳಕೆಗೆ ಯೋಗ್ಯವಾದ ಕಾಗದದಿಂದ ತಯಾರಿಸಿದ ಆಕಾಶಬುಟ್ಟಿಯನ್ನೇ ಬಳಸಿದರೆ ಉತ್ತಮ.

ಸಡಗರ ಸಂಭ್ರಮದಿಂದ ಹಾಗೂ ಸಂತೋಷದಿಂದ ಕೂಡಿದ ಬೆಳಕಿನ ಹಬ್ಬವನ್ನು ಆಚರಿಸುವ ಪ್ರತಿಯೊಬ್ಬರು ಪರಿಸರ ರಕ್ಷಣೆಗೆ ಆದ್ಯತೆ ನೀಡಿದರೆ ಪರಿಸರ ಹಾಗೂ ಪರಿಸರದಲ್ಲಿರು ಜೀವ ಜಂತು, ಪ್ರಾಣಿ ಪಕ್ಷಿಗಳು ಗಿಡ ಮರಗಳ ರಕ್ಷಣೆ ಆದ್ಯತೆ ನೀಡಿದಂತಾಗುತ್ತದೆ ಅಲ್ಲದೆ ಹಬ್ಬ ವನ್ನು ಅರ್ಥಪೂರ್ಣವಾಗಿ ಆಚರಿಸಿದಂತಾಗುತ್ತದೆ.

**– ಸವಿತಾ ನಾಯ್ಕ್**

## ಹಿರಿಯ ಸಾಹಿತಿ ಡಾ॥ ಎಸ್.ಎಲ್. ಭೈರಪ್ಪ ನಿಧನ



ಕನ್ನಡ ಸಾಹಿತ್ಯ ಕಾದಂಬರಿಕಾರರು ಮತ್ತು ಲೇಖಕಕರು, ಹಿರಿಯ ಧೀಮಂತ ಸಾಹಿತಿ ಆದ ಡಾ॥ ಎಸ್.ಎಲ್. ಭೈರಪ್ಪರವರು ದಿ: 25–9–2025ರಂದು ನಿಧನ ಹೊಂದಿದ್ದು, ಅವರ ನಿಧನಕ್ಕೆ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ವತಿಯಿಂದ ಸಂತಾಪ ವ್ಯಕ್ತಪಡಿಸಲಾಯಿತು.

# ಸ್ಫೂರ್ತಿ ಪತ್ತಿನ ಸಹಕಾರ ಸಂಘ ನಿ., ಕೆ.ಎಂ. ದೊಡ್ಡಿ, ಮದ್ದೂರು ಇದರ ಬೆಳ್ಳಿ ಮಹೋತ್ಸವದ ಸಮಾರಂಭ



**ಕೆ.ಎಂ. ದೊಡ್ಡಿ :** ಸ್ಫೂರ್ತಿ ಪತ್ತಿನ ಸಹಕಾರ ಸಂಘವನ್ನು ಸಹಕಾರ ರತ್ನ ಡಾ. ಕೆ.ಎಲ್. ಶಿವರಾಮು ಹಾಗೂ ಅವರ ಸಮಾನ ಮನಸ್ಕರೊಡಗೂಡಿ 1999–2000 ರಂದು ಭಾರತೀನಗರದಲ್ಲಿ ಹೋಬಳಿ ಮಟ್ಟದಲ್ಲಿ ಸ್ಥಾಪಿಸಲಾಯಿತು.

2022ರಲ್ಲಿ ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕಿಗೆ ವಿಸ್ತರಿಸಲ್ಪಟ್ಟು ಜನಸಾಮಾನ್ಯರ ಆಶಾಕಿರಣವಾಗಿ ರೈತರ ಹಾಗೂ ವ್ಯಾಪಾರಸ್ಥರ ದೈನಂದಿನ ಆರ್ಥಿಕ ಚಟುವಟಿಕೆಗಳಿಗೆ ಸ್ಫೂರ್ತಿದಾಯಕವಾಗಿ ಕಾರ್ಯನಿರ್ವಹಿಸುತ್ತಿದ್ದು ಹತ್ತು ಹಲವು ಲಾಭದಾಯಕ ಯೋಜನೆಗಳನ್ನು ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮುಂದಾಯಿತು. ಈ ಭಾಗದ ಸ್ಥಳೀಯ ವ್ಯಾಪಾರಿಗಳಿಗೆ, ಸಾರ್ವಜನಿಕರಿಗೆ, ಸರ್ಕಾರಿ ಹಾಗೂ ಅರೆ ಸರ್ಕಾರಿ ನೌಕರರಿಗೆ ಸಾಲವನ್ನು ನೀಡುತ್ತಾ ದುಡಿಯುವ ಬಂಡವಾಳವನ್ನು ಹೆಚ್ಚಿಸಿಕೊಳ್ಳುತ್ತಾ ಆರ್ಥಿಕ ಸಬಲತೆಯನ್ನು ಪಡೆದು ಜನರ ಮೆಚ್ಚುಗೆ ಮತ್ತು ಪ್ರಶಂಸೆಗೆ ಪಾತ್ರವಾಗಿ ಸಂಘದಲ್ಲಿ ಸ್ಥಿರ ಠೇವಣಿ, ಉಳಿತಾಯ ಠೇವಣಿ, ಪಿಗ್ಮಿಠೇವಣಿ, ರಿಕರಿಂಗ್ ಡಿಪಾಸಿಟ್ ಹಾಗೂ ಸ್ಫೂರ್ತಿಕ್ಯಾಷ್ ಸರ್ಟಿಫಿಕೇಟ್ (8 ವರ್ಷಎಫ್.ಡಿ.) ಸಂಘದ ಸದಸ್ಯರಿಗೆ ತೊಡಗಿಸುವಂತೆ ಮನವೊಲಿಸಿ ಯಶಸ್ವಿನತ್ತ ಹೆಜ್ಜೆ ಇಡುತ್ತಿದೆ.

ಸಂಘವು ಈ ಭಾಗದ ಜನ ಸಮುದಾಯಕ್ಕೆ ಸಂಜೀವಿನಿಯಂತೆ ಕಾರ್ಯನಿರ್ವಹಿಸುತ್ತಿದ್ದು ಸಂಘದ ಸದಸ್ಯರಿಗೆ ಯಶಸ್ವಿನಿ ಗುಂಪು ವಿಮೆ, ರೈತ ಆರೋಗ್ಯ ವಿಮಾ ಸೌಲಭ್ಯಗಳನ್ನು ಕಲ್ಪಿಸಿ ಅವರ ಬದುಕನ್ನು ಹಸನು ಮಾಡುತ್ತಿದೆ. ಸಂಘದ ಸದಸ್ಯರು ನಿಧನರಾದಲ್ಲಿ 5000 ರೂಗಳನ್ನು ಹಾಗೂ ಮರಣನಿಧಿ ಸೌಲಭ್ಯ ಹೊಂದಿದ ಸದಸ್ಯರಿಗೆ 10,000 ರೂಗಳನ್ನು ಮರಣ ಪರಿಹಾರವನ್ನಾಗಿ ನೀಡುತ್ತಾ ಬಂದಿದೆ. ಇದುವರೆಗೂ ಸಂಘದಿಂದ ಸಾವಿರಾರು ಜನ ಪ್ರಯೋಜನ ಪಡೆದಿರುತ್ತಾರೆ.

ಸಂಘದಲ್ಲಿ ಇ–ಸ್ಟಾಂಪ್ ಸೌಲಭ್ಯ (ಛಾಪಾಕಾಗದ) ರೈತರ ಪಹಣಿ, ಎಂ.ಆರ್ ಕಾಪಿ, ಎಲ್ಲಾ ವಿಧವಾದ ವಾಹನ ವಿಮಾ ಸೌಲಭ್ಯ, ಸದಸ್ಯರಿಗೆ ವ್ಯಾಪಾರ ಸಾಲ,ಗೃಹೋಪಯೋಗಿ ಸಾಲ, ಮನೆ ಮತ್ತು ನಿವೇಶನಗಳ ಮೇಲೆ ಅಡಮಾನ ಸಾಲ, ಠೇವಣಿಗಳ ಮೇಲೆ ಆಧಾರ ಸಾಲ, ಪಿಗ್ಮಿ ಸಾಲ, ಬಂಗಾರದ ಒಡವೆಗಳ ಮೇಲಿನ ಸಾಲ, ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಗೆ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸಂಘದ ಸದಸ್ಯರಿಗೆ 3ಕೋಟಿ ರೂ.ಗಳನ್ನು ವ್ಯಾಪಾರ ಸಾಲವಾಗಿ ನೀಡಲಾಗಿದೆ. ಸಂಘವು ಪ್ರತಿ ವರ್ಷ 8 ರಿಂದ 9 ಕೋಟಿ ರೂ.ಗಳ ವಹಿವಾಟು ನಡೆಸುತ್ತಿದೆ. 2025ಕ್ಕೆ ಸಂಘವು 11 ಲಕ್ಷರೂ.ಗಳ ಲಾಭಗಳಿಸಿರುತ್ತದೆ.

ಭಾರತೀನಗರದ ಹಲಗೂರು ರಸ್ತೆಯಲ್ಲಿ 97x26 ಅಡಿ ನಿವೇಶನದಲ್ಲಿ 60x25 ಅಡಿಗಳ ವಿಸ್ತೀರ್ಣವುಳ್ಳ ಎರಡು ಅಂತಸ್ತಿನ ಸ್ವಂತಕಟ್ಟಡವನ್ನು 2023ರಲ್ಲಿ ನಿರ್ಮಿಸಲಾಗಿದ್ದು ಪ್ರಸ್ತುತ ಬೆಳ್ಳಿ ಹಬ್ಬದ ಸವಿನೆನಪಿಗಾಗಿ ಮೇಲ್ಭಾಗದಲ್ಲಿ ಸಭಾಂಗಣವನ್ನು ನಿರ್ಮಿಸಲಾಗಿದೆ.

ಸಂಘವು ಪ್ರಸ್ತುತ 4684 ಮಂದಿ ಸದಸ್ಯರನ್ನೊಳಗೊಂಡಿದ್ದು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಮಂಡಳಿ ಮತ್ತು ನೌಕರರನ್ನು ಹೊಂದಿದ್ದು ಜನರ ಭರವಸೆಯ ಬೆಳಕಾಗಿ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದೆ. ಜನಸಮುದಾಯದ ಆಶಾಜ್ಯೋತಿಯಾದ ಸಂಘವು ತನ್ನದೇ ಆದ ಚೌಕಟ್ಟಿನಲ್ಲಿ ಸರ್ವರ ಒಳಿತಿಗಾಗಿ ದುಡಿಯುತ್ತಿದ್ದು ಪ್ರತಿ ವರ್ಷವು ಸದೃಢಗೊಳ್ಳುತ್ತಾ ಆರ್ಥಿಕ ವಹಿವಾಟನ್ನು ಹೆಚ್ಚಿಸಿಕೊಂಡು ಅನೇಕ ಸಂಘ ಸಂಸ್ಥೆಗಳಿಂದ ಪ್ರಶಂಸೆ ಹಾಗೂ ಪ್ರಶಸ್ತಿಗಳಿಗೆ ಭಾಜನವಾಗಿ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ. ಪ್ರಸಕ್ತ ವರ್ಷ ಸಂಘವು 25 ವರ್ಷಗಳನ್ನು ಪೂರೈಸಿ ಬೆಳ್ಳಿ ಹಬ್ಬದ ಆಚರಣೆಯ ಸಂಭ್ರಮದ ಹೊಸ್ತಿಲಲ್ಲಿರುವುದು ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗಿದೆ.

## ಉಡುಪಿಯ ಬಡಗಬೆಟ್ಟು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವಾರ್ಷಿಕಸಭೆ

# ರೂ. 15.47 ಕೋಟಿ ನಿವ್ವಳ ಲಾಭ : ಬಿ. ಜಯಕರ ಶೆಟ್ಟಿ ಇಂದ್ರಾಳಿ




**ಉಡುಪಿ** : ಉಡುಪಿಯ ಬಡಗಬೆಟ್ಟು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ವಾರ್ಷಿಕ ಸಾಮಾನ್ಯ ಸಭೆಯು ಇತ್ತೀಚೆಗೆ ಉಡುಪಿಯ ಶ್ರೀಮತಿ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಸಭಾಭವನದಲ್ಲಿ ಸೊಸೈಟಿಯ ಅಧ್ಯಕ್ಷರಾದ ಜಯಕರ ಶೆಟ್ಟಿ ಇಂದ್ರಾಳಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘವು ವರದಿ ಸಾಲಿನ ಅಂತ್ಯಕ್ಕೆ ಒಟ್ಟು 21,519 ಸದಸ್ಯರಿಂದ ರೂ. 4.83 ಕೋಟಿ ಪಾಲು ಬಂಡವಾಳ ಹಾಗೂ ರೂ. 573.19 ಕೋಟಿ ಠೇವಣಿ ಹೊಂದಿದ್ದು, ರೂ. 476.99 ಕೋಟಿ ಹೊರಬಾಕಿ ಸಾಲ ಹೊಂದಿರುತ್ತದೆ. 2024–25ನೇ ಸಾಲಿನಲ್ಲಿ ಸರಿಸುಮಾರು ರೂ. 2,956 ಕೋಟಿಗೂ ಮೇಲ್ಪಟ್ಟು ವಾರ್ಷಿಕ ವಹಿವಾಟು ನಡೆಸಿದ್ದು, ವರದಿ ಸಾಲಿನಲ್ಲಿ ರೂ.15.47 ಕೋಟಿ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.15 ಡಿವಿಡೆಂಡ್ ಘೋಷಿಸಲಾಗಿದೆ ಎಂದು ತಿಳಿಸಿದರು.

ಸಮಾಜಮುಖಿ ಕಾರ್ಯಕ್ರಮದ ಅಂಗವಾಗಿ ಸಂಘದ ಪ್ರಧಾನ ಶಾಖೆಯ ಸುತ್ತಮುತ್ತಲಿನ ಆಯ್ದ 13 ಪೌರಕಾರ್ಮಿಕರ ಸೇವೆಯನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಯಿತು. ಹಾಗೂ ಸತತ 216 ಗಂಟೆಗಳ ಕಾಲ ನಿರಂತರ ಭರತನಾಟ್ಯದ ಮೂಲಕ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ದಾಖಲೆ ಬರೆದ ಬ್ರಹ್ಮಾವರದ ಆರೂರಿನ ವಿದುಷಿ ದೀಕ್ಷಾ ವಿ. ರವರನ್ನು ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಸತತವಾಗಿ 2 ಬಾರಿ ರಾಷ್ಟ್ರ ಪ್ರಶಸ್ತಿ, 9 ಬಾರಿ ರಾಜ್ಯ ಮಟ್ಟದ ಪ್ರಶಸ್ತಿಯನ್ನು ಪಡೆದಿರುವ ಸಂಸ್ಥೆಗೆ ಇತ್ತೀಚೆಗೆ ಮಂಗಳೂರಿನಲ್ಲಿ ಜರುಗಿದ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ 2024–25ನೇ ಸಾಲಿನಲ್ಲಿ ಸಂಘವು ಸಾಧಿಸಿದ ಸರ್ವತೋಮುಖ ಅಭಿವೃದ್ಧಿಗಾಗಿ "ಸಾಧನಾ ಪ್ರಶಸ್ತಿ" ಲಭಿಸಿರುತ್ತದೆ. ಸತತವಾಗಿ 19ನೇ ಬಾರಿಗೆ ಒಲಿದ ಜಿಲ್ಲಾ ಪ್ರಶಸ್ತಿ ಇದಾಗಿರುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರು.

ಡಿಜಿಟಲೀಕರಣದ ಹೆಜ್ಜೆಯಾಗಿ ಅಭಿವೃದ್ಧಿಪಡಿಸಿದ "ಚೇತನಾ ಮೊಬೈಲ್ ಆ್ಯಪ್"ನ್ನು ಅಭಿವೃದ್ಧಿಪಡಿಸಿದ್ದು ಸದಸ್ಯರು ಈ ಸೌಲಭ್ಯದ ಪ್ರಯೋಜನ ಪಡೆಯುವಂತೆ ತಿಳಿಸಿದರು.



ಅಬಕಾರಿ ಸಚಿವರಾದ ಶ್ರೀ ಆರ್.ಬಿ. ತಿಮ್ಮಾಪುರ್ ರವರ ಹುಟ್ಟುಹಬ್ಬಕ್ಕೆ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಸ್. ಚಂದ್ರಶೇಖರ್ ರವರು ಶುಭಾಶಯ ಕೋರಿದರು ಲಿಕ್ಕರ್ ಮರ್ಚೆಂಟ್ ಕೋ ಆಪರೇಟಿವ್ ಸೊಸೈಟಿ ನಿರ್ದೇಶಕರಾದ ಆರ್.ಚೆನ್ನಕೇಶವ ರವರು ಹಾಜರಿದ್ದರು.

### ಚಿಕ್ಕಮಗಳೂರು ಟೌನ್ ಸಹಕಾರ ಸಂಘದ ನೂತನ ಕಟ್ಟಡದ ಶಂಕುಸ್ಥಾಪನೆ ಸಮಾರಂಭ

# ಸಹಕಾರ ತತ್ವಗಳಿಗನುಗುಣವಾಗಿ ಸಹಕಾರ ಸಂಘಗಳು ಕಾರ್ಯನಿರ್ವಹಿಸಲು ಸಚಿವ ಕೆ.ಜೆ. ಜಾರ್ಜ್ ಸಲಹೆ

**ಚಿಕ್ಕಮಗಳೂರು :** ಸಹಕಾರ ಸಂಘಗಳು ಅವಶ್ಯವಿರುವ ಸದಸ್ಯರಿಗೆ ಸಾಲ ಸೌಲಭ್ಯ ಒದಗಿಸಲು ಮೊದಲು ಆದ್ಯತೆ ನೀಡಬೇಕು ಇದರಿಂದಾಗಿ ಸಹಕಾರ ತತ್ವ ಆದರ್ಶಗಳಿಗೆ ಪ್ರೇರಣೆ ನೀಡಿದಂತಾಗುತ್ತದೆ ಎಂದು ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಜೆ. ಜಾರ್ಜ್ ಹೇಳಿದರು.

ನಗರದ ಎಂ.ಜಿ. ರಸ್ತೆಯ ಚಿಕ್ಕಮಗಳೂರು ಟೌನ್ ಕೋ–ಆಪರೇಟಿವ್ ಸೊಸೈಟಿಯ ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿ ಮಾತನಾಡಿದ ಅವರು, ಜೀವನದಲ್ಲಿ ಸಂಕಷ್ಟದ ದಿನಗಳನ್ನು ಕಳೆಯುತ್ತಿರುವ ಸದಸ್ಯರಿಗೆ ಸಾಲ ನೀಡಿದರೆ ನಿಗದಿತ ಸಮಯಕ್ಕೆ ಹಿಂತಿರುಗಿಸುವ ಜವಾಬ್ದಾರಿ ಹೊರುತ್ತಾರೆ. ಸಹಕಾರ ರಂಗದಲ್ಲಿ ಪರಿಶಿಷ್ಟರು ಬಡವರು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸಾಲವಿತರಿಸುವ ವ್ಯವಸ್ಥೆ ಕಲ್ಪಿಸಬೇಕು ಇದನ್ನು ಹೊರತಾಗಿ ಆಡಳಿತ ಮಂಡಳಿಯೇ ಸದಸ್ಯರನ್ನು ಕರೆದು ಸಾಲ ವಿತರಿಸುವ ಪ್ರವೃತ್ತಿ ಬೆಳೆಸಬಾರದು, ಇದೀಗ ಶತಮಾನ ಪೂರೈಸಿರುವ ಸೊಸೈಟಿ ಇನ್ನಷ್ಟು ಹೆಚ್ಚು ಪ್ರಗತಿ ಹೊಂದಲಿ ಎಂದು ಆಶಿಸಿದರು.

ಶಾಸಕರಾದ ಹೆಚ್.ಡಿ. ತಮ್ಮಯ್ಯನವರು ಮಾತನಾಡಿ ಭಾರತೀಯರ ಪವಿತ್ರ ದಿನವಾದ ಶ್ರಾವಣ ಮಾಸದಲ್ಲಿ ಸೊಸೈಟಿ ನೂತನ ಕಟ್ಟಡಕ್ಕೆ ಚಾಲನೆ ನೀಡಿರುವುದು ಹೆಮ್ಮೆಯ ಸಂಗತಿ ನಗರದ ಹೃದಯ ಭಾಗದಲ್ಲಿ ಶತಮಾನ ಪೂರೈಸಿ ಉತ್ತಮ ಪ್ರಶಂಸೆಗೆ ಟೌನ್ ಕೋ–ಆಪರೇಟಿವ್ ಸೊಸೈಟಿ ಪಾತ್ರವಾಗಲು ಹಿರಿಯರು ಹಾಕಿಕೊಟ್ಟ



ಮಾರ್ಗದರ್ಶನವೇ ಕಾರಣ, ಈ ಸೊಸೈಟಿಯು ಕೇವಲ ಒಂದು ಸಮಾಜಕ್ಕೆ ಸೀಮಿತವಾಗದೇ ಎಲ್ಲಾ ಜನಾಂಗದವರು ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ ಎಂದರು.

ವಿಧಾನ ಪರಿಷತ್ ಸದಸ್ಯರಾದ ಸಿ.ಟಿ. ರವಿಯವರು ಮಾತನಾಡಿ 115 ವರ್ಷಗಳ ಇತಿಹಾಸವಿರುವ ಅತ್ಯಂತ ಹಳೆಯ ಟೌನ್ ಕೋ–ಅಪರೇಟಿವ್ ಸೊಸೈಟಿಯಾಗಿದೆ, ಈ ಹಿಂದಿನ ಅವಧಿಯಲ್ಲೂ ಸೊಸೈಟಿಯ ಅಭಿವೃದ್ಧಿಗೆ ಸಾಕಷ್ಟು ನೆರವು ನೀಡಿದ್ದು ಮುಂದಿನ ದಿನಗಳಲ್ಲೂ ಸೊಸೈಟಿಯ ಜೊತೆ ಗಟ್ಟಿಯಾಗಿ ನಿಲ್ಲುವುದಾಗಿ ತಿಳಿಸಿದರು.

ಸಹಕಾರ ತತ್ವದ ಮುಖ್ಯ ಉದ್ದೇಶ ಮನುಷ್ಯ ಬದುಕಿನಲ್ಲಿ ಪರಸ್ಪರ ನೆರವಿಗೆ ಧಾವಿಸಬೇಕು, ಎಲ್ಲರೂ ಒಟ್ಟಾಗಿ ಇಡೀ ದೇಶವೇ ಒಂದಾಗಿ ಸಾಗುವುದೇ ಸಹಕಾರಿ ತತ್ವದ ಮೂಲ ಧ್ಯೇಯವಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರು ಹಾಗೂ ಜಿಲ್ಲಾ ಸಹಕಾರ ಯೂನಿಯನ್ನಿನ ನಿರ್ದೇಶಕರಾದ ವರಸಿದ್ಧಿ ವೇಣುಗೋಪಾಲ್ ಮಾತನಾಡಿ, ಸಂಘವು ಕಳೆದ 115 ವರ್ಷಗಳಿಂದ ಸತತವಾಗಿ ಸದಸ್ಯರಿಗೆ ನಿರಂತರವಾಗಿ ಅಗತ್ಯ ಸೇವೆಯನ್ನು ಒದಗಿಸುತ್ತಿದ್ದು. ಪ್ರಸ್ತುತ ಸಂಘವು ಉತ್ತಮವಾಗಿ ಲಾಭದಾಯಕವಾಗಿ ನಡೆಯುತ್ತಿದ್ದು ಎಂ.ಜಿ. ರಸ್ತೆಗೆ ಅಭಿಮುಖವಾಗಿ ನೂತನ ವಾಣಿಜ್ಯ ಸಂಕೀರ್ಣ ಕಟ್ಟಡವನ್ನು ನಿರ್ಮಿಸಲು ಮುಂದಾಗಿದ್ದು ಇದರಿಂದ ಸಂಘವು ಆರ್ಥಿಕವಾಗಿ ಬೆಳವಣಿಗೆ ಹೊಂದಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಮಾರಂಭದಲ್ಲಿ ನಗರಸಭೆ ಅಧ್ಯಕ್ಷರಾದ ಬಿ. ಶೀಲಾದಿನೇಶ್, ವಿಧಾನ ಪರಿಷತ್ ಮಾಜಿ ಸದಸ್ಯ ಎ.ವಿ. ಗಾಯಿತ್ರಿ ಶಾಂತೇಗೌಡ, ಸೊಸೈಟಿಯ ಉಪಾಧ್ಯಕ್ಷರಾದ ಎಂ.ಎಂ. ಹಾಲಮ್ಮ, ನಿರ್ದೇಶಕರುಗಳಾದ ಸಿ.ವಿ. ಕುಮಾರ್, ಎಂ. ಶ್ರೀನಿವಾಸ್, ಸಿ.ಆರ್. ಕೇಶವಮೂರ್ತಿ, ಬಿ.ಎನ್. ರಾಜಣ್ಣಶೆಟ್ಟಿ, ಸಿ.ಆರ್. ಗಂಗಾಧರ, ಬಿ.ಎಸ್. ಪ್ರಶಾಂತ್, ಸಿ.ಡಿ. ರಘು, ಎನ್. ಈಶ್ವರಪ್ಪ, ಅಂಬಿಕಾ, ಜಯಂತಿ, ಕೆ.ಪಿ. ಪರಮೇಶ್ವರ ಉಪಸ್ಥಿತರಿದ್ದರು.

# ಕರ್ನಾಟಕ ರಾಜ್ಯ ಪತ್ರ

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 52 ಶಾಸನ 2025, ಬೆಂಗಳೂರು, ದಿನಾಂಕ: 12.09.2025**

The Karnataka Language Comprehensive Development Act, 2022 (Karnataka Act No. 13 of 2023)ರ ಪ್ರಕರಣ 6 ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Co-operative Societies (Amendment) Act, 2025 (Karnataka Act No. 73 of 2025)ನ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ–IVA) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 73**

(2025 ರ ಸೆಪ್ಟೆಂಬರ್ ತಿಂಗಳ 12ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2025**

(2025 ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸಹಕಾರ ಸಂಘಗಳ

ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ ಸಂ. 11)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ** – (1) ಈ ಅಧಿನಿಯಮವನ್ನು ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ** – ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ ಸಂ.11)ರ (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,–

i) ಖಂಡ (ಎ–1–1)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎ–1–1) "ನೆರವು ಪಡೆದ ಸಂಘ" ಎಂದರೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಜಿಲ್ಲಾ ಪಂಚಾಯತಿ / ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ, ಮಹಾನಗರ ಪಾಲಿಕೆಗಳು, ನಗರ ಪಾಲಿಕೆ, ಪುರಸಭೆ, ಪಟ್ಟಣ ಪಂಚಾಯತಿ ಮತ್ತು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಸ್ಥಾಪಿಸಿದ ನಿಗಮಗಳು/ ಮಂಡಲಿಗಳು/ ಪ್ರಾಧಿಕಾರಗಳಿಂದ, ಸಂಸತ್ತಿನ ಸದಸ್ಯ ಮತ್ತು ರಾಜ್ಯ ವಿಧಾನ ಮಂಡಲ ಸದಸ್ಯ ಇವರ ಅನುದಾನವನ್ನೂ ಒಳಗೊಂಡಂತೆ ಷೇರು ಬಂಡವಾಳ ಅಥವಾ ಸಾಲ ಅಥವಾ ಅನುದಾನದ ರೂಪದಲ್ಲಿ ನೆರವನ್ನು ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (NABARD) ನಿಂದ ಸಂಘಕ್ಕೆ ಅಥವಾ ಸಂಘದ ಸದಸ್ಯನಿಗೆ ಸಾಲ ಪಡೆಯಲು ಖಾತ್ರಿ ಅಥವಾ ಸಾಲ ಅಥವಾ ಬಡ್ಡಿ ಮರುಪಾವತಿಯಲ್ಲಿ ಸೋಡಿ (rebate) ಅಥವಾ ರಿಯಾಯತಿ ಬಡ್ಡಿ ದರದಲ್ಲಿ ಯಾವುದೇ ನಿಧಿ ಅಥವಾ ಬಡ್ಡಿ ಸಹಾಯಧನ (subsidy) ಅಥವಾ ಪ್ರೋತ್ಸಾಹಧನ (incentive) ಅಥವಾ ರಿಯಾಯಿತಿ ದರದಲ್ಲಿ ನಿವೇಶನ ಅಥವಾ ಭೂಮಿಯನ್ನು ಖರೀದಿಸಿದಲ್ಲಿ ಅಥವಾ ಗುತ್ತಿಗೆ ಆಧಾರದ ಮೇಲೆ ನಿವೇಶನ ಅಥವಾ ಭೂಮಿಯನ್ನು ಪಡೆದಿದ್ದಲ್ಲಿ, ತೆರಿಗೆ ಸೋಡಿ ಅಥವಾ ರಿಯಾಯತಿಯನ್ನು ಪಡೆದ, ಪಟ್ಟಣ ಸಹಕಾರಿ ಬ್ಯಾಂಕ್‌ನ್ನು ಹೊರತುಪಡಿಸಿದ ಸಹಕಾರ ಸಂಘ."

(ii) ಖಂಡ (ಇ–1–ಎ) ರಲ್ಲಿರುವ "ನಿರ್ದೇಶಕ" ಎಂಬ ಪದದ ಬದಲಿಗೆ "ಸದಸ್ಯ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(iii) ಖಂಡ (ಇ–2–1) ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

(ಇ–2–2) "ಜಿಲ್ಲಾ ಸಹಕಾರ ಒಕ್ಕೂಟ" ಎಂದರೆ, ಜಿಲ್ಲೆಯಲ್ಲಿರುವ ವಿವಿಧ ರೀತಿಯ ಸಹಕಾರ ಸಂಘಗಳ ಸದಸ್ಯರು ಮತ್ತು ಸಿಬ್ಬಂದಿಗಳಲ್ಲಿ ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ ನೀಡುವ ಜಿಲ್ಲಾ ಮಟ್ಟದ ಫೆಡರಲ್ ಸಹಕಾರ."

**3. ಪ್ರಕರಣದ 18–ಬಿ ತಿದ್ದುಪಡಿ.**– ಮೂಲ ಅಧಿನಿಯಮದ, 18–ಬಿ ಪ್ರಕರಣದಲ್ಲಿನ (iv)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

‘`(v) ಆತನ ಸದಸ್ಯತ್ವವು 18–ಎ ಪ್ರಕರಣದ (ಎ) ಉಪಖಂಡದಡಿ ಕೊನೆಯಾಗಿದ್ದರೆ,”

**4. ಪ್ರಕರಣ 20ರ ತಿದ್ದುಪಡಿ.–** ಮೂಲ ಅಧಿನಿಯಮದ 20ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ (v)ನೇ ಉಪಖಂಡದಲ್ಲಿನ ವಿವರಣೆಯಲ್ಲಿರುವ,–

(i) “ಇಪ್ಪತ್ತೊಂದು ದಿನಗಳಿಗೆ” ಎಂಬ ಪದಗಳ ಬದಲಿಗೆ “ಇಪ್ಪತ್ತು ದಿನಗಳಿಗೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) “ನಲವತ್ತೈದು ದಿನಗಳಿಗೆ” ಎಂಬ ಪದಗಳ ಬದಲಿಗೆ “ಮೂವತ್ತು ದಿನಗಳಿಗೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. ಪ್ರಕರಣ 21ರ ತಿದ್ದುಪಡಿ.–** ಮೂಲ ಅಧಿನಿಯಮದ 21ನೇ ಪ್ರಕರಣದ, (3)ನೇ ಉಪಪ್ರಕರಣದಲ್ಲಿನ ವಿವರಣೆಗೂ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

“(4) ಈ ಅಧಿನಿಯಮ ಅಥವಾ ಅದರಡಿ ರಚಿಸಿದ ಉಪ–ವಿಧಿಗಳಲ್ಲಿ ಏನೇ ಒಳಗೊಂಡಿದ್ದರೂ, ಮಾಧ್ಯಮಿಕ ಸಹಕಾರ ಸಂಘ, ಫೆಡರಲ್ ಸಹಕಾರ ಸಂಘ ಮತ್ತು ಅಪೆಕ್ಸ್ ಸಹಕಾರ ಸಂಘಗಳ ಮಂಡಲಿಯ ಚುನಾವಣೆಯಲ್ಲಿ ಮೀಸಲಾತಿ ಸ್ಥಾನಗಳಿಗೆ, ಸದರಿ ಸಂಘಗಳ ಮತದಾರರು ಯಾವುದೇ ವರ್ಗದವಾದರೂ, ನಿಯಮಿಸಬಹುದಾದ ವಿಧಾನದಲ್ಲಿ ತಮ್ಮ ಮತಗಳನ್ನು ಚಲಾಯಿಸಲು ಅರ್ಹರಾಗಿರತಕ್ಕದ್ದು.”

**6. ಪ್ರಕರಣ 28ಎ ತಿದ್ದುಪಡಿ.–** ಮೂಲ ಅಧಿನಿಯಮದ, 28ಎ ಪ್ರಕರಣದಲ್ಲಿ,–

(i) (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

“(2) ಸಹಕಾರ ಸಂಘಗಳ ಮಂಡಲಿಯು ಮುಖ್ಯ ಕಾರ್ಯನಿರ್ವಾಹಕನ ಹೊರತುಪಡಿಸಿ ಹದಿಮೂರು ಸದಸ್ಯರನ್ನು ಹೊಂದಿರತಕ್ಕದ್ದು, ಆದರೆ ನಿಯಮಿಸಬಹುದಾದಂತೆ ಸದಸ್ಯರ ಸಂಖ್ಯೆಯನ್ನು ಮೀರತಕ್ಕದ್ದಲ್ಲ.

(2ಎ) ಉಪಪ್ರಕರಣ (2)ರಡಿ ನಿರ್ದಿಷ್ಟಪಡಿಸಿದ ಮಂಡಲಿ ಸದಸ್ಯರ ಸಂಖ್ಯೆಗೆ ಒಳಪಟ್ಟು, ಅನುಮತಿಸಬಹುದಾದ ಮಿತಿಗಳನ್ನು ಒಳಗೊಂಡು ಆ ಸಂಘದ ಮಂಡಲಿಯ ಸಂಯೋಜನೆಗಾಗಿ ಸಹಕಾರ ಸಂಘದ ಉಪವಿಧಿಗಳನ್ನು ಉಪಬಂಧಿಸತಕ್ಕದ್ದು,–

(ಎ) ನೆರವು ಪಡೆದ ಸಹಕಾರ ಸಂಘದ ಸಂದರ್ಭದಲ್ಲಿ, ಸರ್ಕಾರದ ನಾಮನಿರ್ದೇಶನವು 28ಎ ಪ್ರಕರಣದ (4ಬಿ) ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ;

(ಬಿ) ಪ್ರಕರಣ 53–ಎರಲ್ಲಿ ನಿರ್ದಿಷ್ಟಪಡಿಸಿದಂತೆ ಸರ್ಕಾರದ ನಾಮನಿರ್ದೇಶನದ ಸಂದರ್ಭದಲ್ಲಿ, ಅಂಥ ನಾಮನಿರ್ದೇಶಿತ ವ್ಯಕ್ತಿಗಳು ಕಚೇರಿಯ ಪದಾಧಿಕಾರಿಗಳ ಚುನಾವಣೆಯಲ್ಲಿ ಮತ ಚಲಾಯಿಸಲಾಗಲಿ ಅಥವಾ ಸ್ಪರ್ಧೆಗಾಗಲಿ ಅರ್ಹರಲ್ಲ;

(ಸಿ) ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಹೊರತಾದ ಎಲ್ಲಾ ಸಹಕಾರ ಸಂಘಗಳ ಸಂದರ್ಭದಲ್ಲಿ, ಅವಶ್ಯವಿದ್ದಲ್ಲಿ, ಹಣಕಾಸು ನೀಡಿಕೆ ಅಥವಾ ಪತ್ತಿನ ಏಜೆನ್ಸಿಯಿಂದ ಪದನಿಮಿತ್ತ ಸದಸ್ಯ ಮತ್ತು ನಾಮನಿರ್ದೇಶಿತ.

– ಮಂಡಲಿಯ ಉಳಿದ ಸದಸ್ಯರನ್ನು 29–ಇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಚುನಾವಣೆಯ ಮೂಲಕ ಮಾತ್ರ ತುಂಬತಕ್ಕದ್ದು.”

(ii) ಉಪಪ್ರಕರಣ (3) ರಲ್ಲಿ,–

(i) “ಪ್ರತಿ ಸಹಕಾರ ಸಂಘದ ಸಮಿತಿಯಲ್ಲಿ” ಎಂಬ ಪದಗಳಿಗೆ ಬದಲಾಗಿ “ಪ್ರತಿ ಪ್ರಾಥಮಿಕ, ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್. ಸಹಕಾರ ಸಂಘದ ಸಮಿತಿಯಲ್ಲಿ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) ಪರಂತುಕದ ತರುವಾಯ, ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು, ಎಂದರೆ:–

“ಮತ್ತು ಪರಂತು ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳ ಸಮಿತಿಯಲ್ಲಿ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮಿತಿ ಸದಸ್ಯರ ಸಂಖ್ಯಾ ಮಿತಿಯು ಹೆಚ್ಚಾದಲ್ಲಿ, ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಸಮಿತಿಯ ಸದಸ್ಯರ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸಲು ಮತ್ತು ಅಂಥ ಇತರ ಕಾರ್ಯವಿಧಾನವನ್ನು ಆಯಾ ಸಹಕಾರ ಸಂಘಗಳು ತಮ್ಮ ಉಪವಿಧಿಗಳಲ್ಲಿ ನಿಯಮಿಸಬಹುದಾದಂತೆ ಉಪಬಂಧಗಳನ್ನು ಕಲ್ಪಿಸತಕ್ಕದ್ದು:

ಅಲ್ಲದೆ ಪರಂತು, ಮಾಧ್ಯಮಿಕ ಸಹಕಾರ ಸಂಘಗಳ ಮಂಂಡಲಿಗಳಲ್ಲಿ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಸ್ಥಾನಗಳನ್ನು ಮೀಸಲಿರಿಸಿದ ತರುವಾಯ ಉಳಿದ ಶೇಕಡ ನಲವತ್ತರಷ್ಟು ಸ್ಥಾನಗಳನ್ನು ಸಹಕಾರ ಸಂಘಗಳ ಪ್ರತಿನಿಧಿಗಳಿಗಾಗಿ ಮೀಸಲಿಡತಕ್ಕದ್ದು.”

**7. ಪ್ರಕರಣ 28ಬಿ ತಿದ್ದುಪಡಿ.–** ಮೂಲ ಅಧಿನಿಯಮದ 28ಬಿ ಪ್ರಕರಣದ, (3)ನೇ ಉಪಪ್ರಕರಣದಲ್ಲಿನ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**8. ಪ್ರಕರಣ 28ಸಿ ತಿದ್ದುಪಡಿ.–** ಮೂಲ ಅಧಿನಿಯಮದ 28ಸಿ ಪ್ರಕರಣದ, (2)ನೇ ಉಪಪ್ರಕರಣದ (ಟಿ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

“(ಯು) ಮಂಡಲಿಯ ಪ್ರತಿ ಚುನಾಯಿತ ನಿರ್ದೇಶಕನು ನಿಯಮಿಸಬಹುದಾದಂತೆ ತನ್ನ ಪದಾವಧಿಯ ಪ್ರತಿ ಆರ್ಥಿಕ ವರ್ಷದಲ್ಲಿ ಅವನು/

ಅವಳು ಮತ್ತು ಅವನ/ಅವಳ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು.

ವಿವರಣೆ:– ಈ ಖಂಡದ ಉದ್ದೇಶಕ್ಕಾಗಿ ಕುಂಟುಂಬ ಎಂದರೆ, "ನಿರ್ದೇಶಕ ಮತ್ತು ಅವನ/ಅವಳ ಪತಿ/ಪತ್ನಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

(ವಿ) ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ನಿಯಮಿಸಲಾದ ವಿಧಾನದಂತೆ ಅವನ/ಅವಳ ಪದಾವಧಿಯ ಪ್ರತಿ ಆರ್ಥಿಕ ವರ್ಷದ ಕೊನೆಯಲ್ಲಿ ಆಸ್ತಿ ಮತ್ತು ಹೊಣೆಗಾರಿಕೆಯ ವಿವರ ಪಟ್ಟಿಯನ್ನು ಘೋಷಿಸತಕ್ಕದ್ದು.

ವಿವರಣೆ:– ಈ ಖಂಡದ ಉದ್ದೇಶಕ್ಕಾಗಿ ಕುಂಟುಂಬ ಎಂದರೆ, "ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಅವನ/ಅವಳ ಪತಿ/ಪತ್ನಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

**9. ಪ್ರಕರಣ 29ಸಿ ತಿದ್ದುಪಡಿ.–** ಮೂಲ ಅಧಿನಿಯಮದ 29ಸಿ ಪ್ರಕರಣದ, (1)ನೇ ಉಪಪ್ರಕರಣದ, (ಪಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಕ್ಯೂ) ಅವನು/ಅವಳು ಪ್ರತಿ ಆರ್ಥಿಕ ವರ್ಷದಲ್ಲಿ ಅವನ/ಅವಳ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸಲು ವಿಫಲವಾದರೆ,

ವಿವರಣೆ:– ಈ ಖಂಡದ ಉದ್ದೇಶಕ್ಕಾಗಿ ಕುಂಟುಂಬ ಎಂದರೆ, "ಅಭ್ಯರ್ಥಿ, ಅವನ/ಅವಳ ಪತಿ/ಪತ್ನಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

**10. ಪ್ರಕರಣ 29ಇ ತಿದ್ದುಪಡಿ.–** ಮೂಲ ಅಧಿನಿಯಮದ ,29ಇ ಪ್ರಕರಣದಲ್ಲಿ,–

(i) ಮೊದಲನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು;

(ii) ಎರಡನೇ ಪರಂತುಕದ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಮತ್ತು ಪರಂತು ಮಂಡಲಿಯು ಯಾವ ಸದಸ್ಯರ ವರ್ಗದಿಂದ ಆಕಸ್ಮಿಕ ಖಾಲಿಸ್ಥಾನ ಉಂಟಾಗಿದೆಯೋ, ಅದೇ ವರ್ಗದ ಸದಸ್ಯರಿಂದ ನಾಮನಿರ್ದೇಶನ ಮಾಡುವ ಮೂಲಕ ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿ ಮಾಡತಕ್ಕದ್ದು"; ಮತ್ತು

(iii) ಮೂರನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**11. ಪ್ರಕರಣ 29ಎಫ್ ತಿದ್ದುಪಡಿ.–** ಮೂಲ ಅಧಿನಿಯಮದ, 29ಎಫ್ ಪ್ರಕರಣದಲ್ಲಿ,–

(i) ಉಪಪ್ರಕರಣ (1)ರ ತರುವಾಯ ಈ ಮುಂದಿನ ಉಪ–ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"(1–ಎ) ಸಹಕಾರ ಸಂಘಗಳ ರಿಜಿಸ್ಟ್ರಾರನ ಆದೇಶಕ್ಕೆ ಒಳಪಟ್ಟು, ವಿಯಮಿಸಬಹುದಾದಂತೆ ಸರದಿಯ ಮೇಲೆ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು, ಇತರೆ ಹಿಂದುಳಿದ ವರ್ಗ ಹಾಗೂ ಮಹಿಳೆಗಾಗಿ ರಾಜ್ಯದಲ್ಲಿನ ಪ್ರಾಥಮಿಕ ಕೃಷಿ ಸಹಕಾರ ಸಂಘ (PACS), ಹಾಲು ಉತ್ಪಾದಕರ ಸಹಕಾರ ಸಂಘ (MPCS) ಮತ್ತು ಇತರೆ ಪ್ರಾಥಮಿಕ ನೆರವು ಪಡೆದ ಸಹಕಾರ ಸಂಘದ ಅಂಥ ಸಂಖ್ಯೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಮೀಸಲಿರಿಸತಕ್ಕದ್ದು.

(ii) ಉಪಪ್ರಕರಣ (5) ಮತ್ತು (6)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,–

"(5) ಮುಖ್ಯ ಕಾರ್ಯನಿರ್ವಾಹಕನು ಮಂಡಲಿಯ ರಚನೆಯಾದ ದಿನಾಂಕದಿಂದ ಅಥವಾ ಸಾಮಾನ್ಯ ಚುನಾವಣೆಯ ನಂತರ ಮಂಡಲಿಯು ರಚನೆಯಾಗಿದೆಯೆಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್–ನ ಪದಾವಧಿಯು ಮುಕ್ತಾಯವಾಗುವ ನಿಕಟ ಪೂರ್ವದಲ್ಲಿ, ತಕ್ಷಣವೇ ಸಹಕಾರ ಸಂಘಗಳ ಉಪವಿಧಿಗಳ ಮೇರೆಗೆ ಚುನಾಯಿಸಬೇಕಾದ ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಮತ್ತು ಅಗತ್ಯಪಡಿಸಲಾದಂಥ ಇತರ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ ನಿಯಮಿಸಿದ ರೀತಿಯಲ್ಲಿ ಮಂಡಳಿಯ ಎಲ್ಲಾ ಸದಸ್ಯರ ಸಭೆಯನ್ನು ಕರೆಯತಕ್ಕದ್ದು. ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್–ನ ಚುನಾವಣೆಗಾಗಿ ಅಭ್ಯರ್ಥಿಯಾಗಿರದ ಸದಸ್ಯರಲ್ಲಿ ಒಬ್ಬರನ್ನು ಅಂಥ ಸಭೆಯ ಅಧ್ಯಕ್ಷತೆ ವಹಿಸುವುದಕ್ಕೆ ಆಯ್ಕೆ ಮಾಡತಕ್ಕದ್ದು:

ಪರಂತು ಸಹಕಾರ ಸಂಘದ ನೋಂದಣಿಯ ತರುವಾಯ ನಡೆದ ಮೊದಲ ಸಾಮಾನ್ಯ ಸಭೆಯಲ್ಲಿ ಚುನಾಯಿತರಾದ ಪ್ರಥಮ ಮಂಡಲಿಯ ಸದಸ್ಯರು ನಿಯಮಿಸಬಹುದಾದಂಥ ರೀತಿಯಲ್ಲಿ ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಮತ್ತು ಇತರೆ ಪದಾಧಿಕಾರಿಗಳನ್ನು ಆಯ್ಕೆ ಮಾಡತಕ್ಕದ್ದು.

(6) ಮುಖ್ಯ ಕಾರ್ಯನಿರ್ವಾಹಕನು, ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಅಥವಾ ಇತರ ಪದಾಧಿಕಾರಿಗಳ ಪದವು ಆಕಸ್ಮಿಕವಾಗಿ ಖಾಲಿಯಾದಾಗಲೆಲ್ಲಾ, ಅಂಥ ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ಮಂಡಲಿಯ ಸದಸ್ಯರ ಸಭೆಯನ್ನು ಕರೆಯತಕ್ಕದ್ದು ಮತ್ತು ಉಪಪ್ರಕರಣ (5)ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(7) ಮುಖ್ಯ ಕಾರ್ಯನಿರ್ವಾಹಕನು, ಸಭೆಯ ದಿನಾಂಕದಿಂದ ಮೂರು ದಿನಗಳ ಒಳಗಾಗಿ ಸಭೆ ಕರೆಯುವ ನೋಟೀಸಿನ ಒಂದು ಪ್ರತಿಯನ್ನು ಹಾಗೂ ಸಭೆಯ ನಡಾವಳಿಗಳ ಒಂದು ಪ್ರತಿಯನ್ನೂ ಕೂಡ ರಿಜಿಸ್ಟ್ರಾರರಿಗೆ ಹಾಗೂ ಸಹಕಾರ ಚುನಾವಣಾ ವಿಭಾಗಕ್ಕೆ ಕಳುಹಿಸತಕ್ಕದ್ದು.

(8) ಮುಖ್ಯ ಕಾರ್ಯನಿರ್ವಾಹಕನು ಉಪಪ್ರಕರಣ (5) ಮತ್ತು ಉಪಪ್ರಕರಣ (6)ಕ್ಕೆ ಅನುಸಾರವಾಗಿ ಸಭೆ ಕರೆಯಲು ವಿಫಲವಾದರೆ ಸಹಕಾರ ಚುನಾವಣಾ ಪ್ರಾಧಿಕಾರ ಅಥವಾ ಸಭೆಯನ್ನು ಕರೆಯಲು ಅದರ ಮೂಲಕ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಸದರಿ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳಿಗಾಗಿ ಸಭೆಯನ್ನು ಕರೆಯತಕ್ಕದ್ದು."

**12. ಪ್ರಕರಣ 29ಜಿ ತಿದ್ದುಪಡಿ.–** ಮೂಲ ಅಧಿನಿಯಮದ 29ಜಿ ಪ್ರಕರಣದ (4)ನೇ ಉಪಪ್ರಕರಣದ (ಜೆ) ಖಂಡದ ತರುವಾಯ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಜೆ1) ಅವನು/ಅವಳು ಪ್ರತಿ ಆರ್ಥಿಕ ವರ್ಷದ ಕೊನೆಯಲ್ಲಿ ಅವನ/ಅವಳ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು,

**ವಿವರಣೆ:–** ಈ ಖಂಡದ ಉದ್ದೇಶಕ್ಕಾಗಿ ಕುಂಟುಂಬ ಎಂದರೆ, "ಮುಖ್ಯ ಕಾರ್ಯನಿರ್ವಾಹಕ, ಅವನು/ಅವಳು ಮತ್ತು ಅವನ/ಅವಳ ಪತಿ/ಪತ್ನಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

**13. ಪ್ರಕರಣ 29ಹೆಚ್ ತಿದ್ದುಪಡಿ.–** ಮೂಲ ಅಧಿನಿಯಮದ 29ಹೆಚ್ ಪ್ರಕರಣದಲ್ಲಿನ,–

(i) ಉಪಪ್ರಕರಣ (1)ರಲ್ಲಿನ "ಚುನಾಯಿತ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(ii) ಉಪಪ್ರಕರಣ (2)ರಲ್ಲಿನ "ಚುನಾಯಿತ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;ಮತ್ತು

(iii) ಉಪಪ್ರಕರಣ (2)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು 28ಎ ಪ್ರಕರಣದ (4ಎ) ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ವೃತ್ತಿಪರ ನಿರ್ದೇಶಕರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು ಅವಿಶ್ವಾಸ ನಿರ್ಣಯದ ಭಾಗವಾಗಿರತಕ್ಕದ್ದಲ್ಲ."

**14. ಪ್ರಕರಣ 30ರ ತಿದ್ದುಪಡಿ.–** ಮೂಲ ಅಧಿನಿಯಮದ, 30ನೇ ಪ್ರಕರಣದ (2)ನೇ ಉಪ ಪ್ರಕರಣದ ಮೊದಲ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**15. ಪ್ರಕರಣ 31ರ ತಿದ್ದುಪಡಿ.–** ಮೂಲ ಅಧಿನಿಯಮದ, 31ನೇ ಪ್ರಕರಣದ (1)ನೇ ಉಪ ಪ್ರಕರಣದ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**16. ಹೊಸ ಪ್ರಕರಣ 39ಎಬಿ ಸೇರ್ಪಡೆ.–** ಮೂಲ ಅಧಿನಿಯಮದ 39ಎಎ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"**39ಎಬಿ. ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆ.–** ಮಂಡಲಿಗೆ ಸ್ಪರ್ಧಿಸುವ ಪ್ರತಿ ಅಭ್ಯರ್ಥಿಯು ನಾಮಪತ್ರ ಸಲ್ಲಿಸುವ ಸಮಯದಲ್ಲಿ ಅವನು/ಅವಳು ಮತ್ತು ಅವನ/ಅವಳ ಕುಟುಂಬದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು.

**ವಿವರಣೆ:–** ಈ ಖಂಡದ ಉದ್ದೇಶಕ್ಕಾಗಿ ಕುಂಟುಂಬ ಎಂದರೆ, "ಅಭ್ಯರ್ಥಿ ಮತ್ತು ಅವನ/ಅವಳ ಪತಿ/ಪತ್ನಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

**17. ಹೊಸ ಪ್ರಕರಣ 53ಎ ಸೇರ್ಪಡೆ.–** ಮೂಲ ಅಧಿನಿಯಮದ, 53ನೇ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"**53ಎ. ಕೆಲವು ಸಂದರ್ಭಗಳಲ್ಲಿ ರಾಜ್ಯ ಸರ್ಕಾರದ ಮೂಲಕ ಮಂಡಲಿಯ ಸದಸ್ಯರ ನಾಮನಿರ್ದೇಶನ.–** ರಾಜ್ಯ ಸರ್ಕಾರವು, ಪಟ್ಟಣ ಸಹಕಾರಿ ಬ್ಯಾಂಕ್ ನ್ನು ಹೊರತುಪಡಿಸಿ ಸಹಕಾರ ಸಂಘದ ಸದಸ್ಯರಲ್ಲಿ ಮೂವರು ವ್ಯಕ್ತಿಗಳನ್ನು ತನ್ನ ಪ್ರತಿನಿಧಿಗಳಾಗಿ ನಾಮನಿರ್ದೇಶಿಸತಕ್ಕದ್ದು, ಅವರಲ್ಲಿ ಒಬ್ಬರು ಅನುಸೂಚಿತ ಜಾತಿಗೆ ಸೇರಿರತಕ್ಕದ್ದು, ಒಬ್ಬರು ಅನುಸೂಚಿತ ಬುಡಕಟ್ಟಿಗೆ ಹಾಗೂ ಒಬ್ಬರು ಸಾಮಾನ್ಯ ಪ್ರವರ್ಗದವರಾಗಿರತಕ್ಕದ್ದು, ಪ್ರತಿ ನೆರವು ಪಡೆದ ಸಂಘದ ಮಂಡಲಿಯಲ್ಲಿ ಆ ಪೈಕಿ ಒಬ್ಬರು ಮಹಿಳೆಯಾಗಿರತಕ್ಕದ್ದು. ಅಂಥ ನಾಮನಿರ್ದೇಶಿತ ವ್ಯಕ್ತಿಗಳು ಪದಾಧಿಕಾರಿ ಚುನಾವಣೆಯಲ್ಲಿ. ಮತದಾನ ಮಾಡಲಾಗಲಿ ಅಥವಾ ಸ್ಪರ್ಧಿಸಲಾಗಲಿ ಅರ್ಹರಾಗಿರುವುದಿಲ್ಲ:

ಪರಂತು, ಸರ್ಕಾರವು ತನ್ನ ಪ್ರತಿನಿಧಿಯಾಗಿ. ನಾಮನಿರ್ದೇಶಿಸಿದ ಸದರಿ ಸಂಘದ ಮಂಡಲಿಯಲ್ಲಿ ಪ್ರತಿನಿಧಿಯಾಗಿರದ ಅಂಥ ಸಮುದಾಯದ ವರ್ಗ ಅಥವಾ ಗುಂಪಿನ ಸದಸ್ಯರನ್ನು ಪರಿಗಣಿಸತಕ್ಕದ್ದು. ಮತ್ತು ಪರಂತು, ಹಾಗೆ ನಾಮನಿರ್ದೇಶಿಸಲಾದ ವ್ಯಕ್ತಿಯು ರಾಜ್ಯ ಸರ್ಕಾರದ ಇಚ್ಛೆಯ ಅವಧಿಯವರೆಗೆ ಮಂಡಲಿಯ ಸದಸ್ಯನಾಗಿ ಹುದ್ದೆ ಹೊಂದಿರತಕ್ಕದ್ದು."

**18. ಪ್ರಕರಣ 57ರ ತಿದ್ದುಪಡಿ.–** ಮೂಲ ಅಧಿನಿಯಮದ, 57ನೇ ಪ್ರಕರಣದ, (2–ಎ) ಉಪಪ್ರಕರಣದ ಎರಡನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**19. ಪ್ರಕರಣ 57–ಎ ತಿದ್ದುಪಡಿ.–** ಮೂಲ ಅಧಿನಿಯಮದ 57–ಐಎ ಪ್ರಕರಣದ (1)ನೇ ಉಪಪ್ರಕರಣದ ತರುವಾಯ ಈ ಮುಂದಿನ

ಉಪಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"(1ಎ) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2025ರ ಪ್ರಾರಂಭದ ದಿನಾಂಕದ ತರುವಾಯ ನೋಂದಾಯಿತ ಎಲ್ಲಾ ಸಹಕಾರ ಸಂಘಗಳು 2ನೇ ಪ್ರಕರಣದ (ಇ–2–2) ಖಂಡದಲ್ಲಿ ಪರಿಭಾಷಿಸಲಾದ ಸಂಬಂಧಪಟ್ಟ ಜಿಲ್ಲಾ ಸಹಕಾರ ಒಕ್ಕೂಟಕ್ಕೆ ಸದಸ್ಯರಾಗತಕ್ಕದ್ದು."

(1ಬಿ) ಈ ಅಧಿನಿಯಮದಡಿ ಈಗಾಗಲೇ ನೋಂದಾಯಿಸಲಾದ ಎಲ್ಲಾ ಸಹಕಾರ ಸಂಘಗಳು, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2025ರ ಪ್ರಾರಂಭದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಸಂಬಂಧಿತ ಜಿಲ್ಲಾ ಸಹಕಾರ ಒಕ್ಕೂಟದ ಸದಸ್ಯರಾಗತಕ್ಕದ್ದು."

**20. ಪ್ರಕರಣ 58ರ ತಿದ್ದುಪಡಿ.–** ಮೂಲ ಅಧಿನಿಯಮದ, 58ನೇ ಪ್ರಕರಣದಲ್ಲಿ,–

(i) ಖಂಡ (ಎ), (ಬಿ), (ಸಿ) ಗಳನ್ನು ಬಿಟ್ಟುಬಿಡತಕ್ಕದ್ದು;

(ii) ಖಂಡ (ಡಿ)ರಲ್ಲಿರುವ "ಯಾವುದೇ ಸಹಕಾರ ಬ್ಯಾಂಕಿನಲ್ಲಿ" ಎಂಬ ಪದಗಳ ಬದಲಿಗೆ "ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ. ಅಥವಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ. ಅಥವಾ ಪಟ್ಟಣ ಸಹಕಾರಿ ಬ್ಯಾಂಕ್ ದಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) ಖಂಡ (ಇ)ರಲ್ಲಿರುವ "ಮತ್ತು ಮುಂದಿನ ವಾರ್ಷಿಕ ಸಾಮಾನ್ಯ ನಿಕಾಯದ ಅನುಮೋದಿಸಿದಂತೆ" ಎಂಬ ಪದಗಳಿಗೆ ಬದಲಾಗಿ "ರಿಜಿಸ್ಟ್ರಾರನ ಪೂರ್ವಾನುಮೋದನೆಯೊಂದಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iv) ಎರಡನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**21. ಪ್ರಕರಣ 63ರ ತಿದ್ದುಪಡಿ.–** ಮೂಲ ಅಧಿನಿಯಮದ, 63ನೇ ಪ್ರಕರಣದಲ್ಲಿನ (1)ನೇ ಉಪ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(1–ಎ), ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 (1949ರ ಕೇಂದ್ರ ಅಧಿನಿಯಮ 10)ರ ಮೂಲಕ ಆಡಳಿತ ನಡೆಸಲಾಗುತ್ತಿರುವ ಸಹಕಾರ ಬ್ಯಾಂಕುಗಳನ್ನು ಹೊರತುಪಡಿಸಿ, ಪ್ರತಿಯೊಂದು ಸಹಕಾರ ಸಂಘವು ಪ್ರತಿ ಮೂರು ವರ್ಷಗಳಿಗೆ ಒಮ್ಮೆ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರ ಮೂಲಕ ತನ್ನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಮಾಡಿಸತಕ್ಕದ್ದು"

**22. ಪ್ರಕರಣ 72ರ ತಿದ್ದುಪಡಿ.–** ಮೂಲ ಅಧಿನಿಯಮದ, 72ನೇ ಪ್ರಕರಣದಲ್ಲಿನ (3)ನೇ ಉಪ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3ಎ) ರಿಜಿಸ್ಟ್ರಾರನು ಸಹಕಾರ ಸಂಘದ ಸಮಾಪನೆಯನ್ನು ರದ್ದುಗೊಳಿಸುವ ತನ್ನ ಆದೇಶದಲ್ಲಿ, ಸಮಾಪಕನನ್ನು ಸದರಿ ಸಹಕಾರ ಸಂಘದ ಚುನಾವಣೆ ನಡೆಸಲು ಆಡಳಿತಾಧಿಕಾರಿಯಾಗಿ ಮರುಪದನಾಮಿಕರಿಸತಕ್ಕದ್ದು."

**23. 98ಕ್ಯೂ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ, 98ಕ್ಯೂ ಪ್ರಕರಣದ (1)ನೇ ಉಪ ಪ್ರಕರಣದಲ್ಲಿನ "ರದ್ದುಗೊಳಿಸಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ" ಎಂಬ ಪದಗಳ ಬದಲಾಗಿ "ಆಡಳಿತಾಧಿಕಾರಿಯ ಪದಾವಧಿಯು ಮುಕ್ತಾಯಕ್ಕೆ ಮೊದಲು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

The above translation of the Karnataka Co-operative Societies (Amendment) Act, 2025 (Karnataka Act 73 of 2025) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No. 13 of 2023).

**ಥಾವರ್ ಚಂದ್ ಗೆಹ್ಲೋಟ್**

**ಕರ್ನಾಟಕ ರಾಜ್ಯಪಾಲರು**

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**

**ಮತ್ತು ಅವರ ಹೆಸರಿನಲ್ಲಿ,**

**ಜಿ. ಶ್ರೀಧರ್**

**ಸರ್ಕಾರದ ಕಾರ್ಯದರ್ಶಿ,**

**ಸಂಸದೀಯ ವ್ಯವಹಾರಗಳು ಮತ್ತು**

**ಶಾಸನ ರಚನೆ ಇಲಾಖೆ.**